International Journal of Kannada Research 2015; 1(3): 06-13




International Journal of Kannada Research
www.kannadajournal.com

**ISSN: 2454–5813**
IJSR 2015; 1(3): 06-13
© 2015 IJKS
www.kannadajournal.com
Received: 02-10-2015
Accepted: 03-11-2015

**BG Kulkarni**
Asst. Professor, Department of Political, Basavaprabhu Kore Degree College, Chikodi, Dist: Belagavi

**Correspondence**
**BG Kulkarni**
Asst. Professor, Department of Political, Basavaprabhu Kore Degree College, Chikodi, Dist: Belagavi

# ವಿದ್ಯಾರ್ಥಿ ಕ್ರೀಯಾಶೀಲತೆ ಮತ್ತು ಪ್ರಸ್ತುತ ರಾಜಕೀಯ(ಸಾಹಿತ್ಯ ಪರಾಮರ್ಶೆ)

**BG Kulkarni**

ಕರ್ನಾಟಕದಲ್ಲಿ ವಿಧ್ಯಾರ್ಥಿಗಳು ಸ್ವಾತಂತ್ರ್ಯ ಹೋರಾಟದಲ್ಲಿ ಅತ್ಯಂತ ಪ್ರಮುಖವಾದ ಪಾತ್ರವಹಿಸಿರುವದು ನಮ್ಮೆಲ್ಲರಿಗೂ ಗೊತ್ತಿರುವ ವಿಷಯ. ಸ್ವಾತಂತ್ರ್ಯ ನಂತರ ಶಿಕ್ಷಣ ಸುಧಾರಣೆಯ ರೂಪುರೇಷೆಗಳನ್ನು ಸಿದ್ಧಪಡಿಸುವಾಗ ಕೂಡ ಅವರು ಗಮನಾರ್ಹವಾದ ಪ್ರಭಾವವನ್ನು ಬೀರಿದ್ದಾರೆ. ಈ ಹಿನ್ನೆಲೆಯಿಂದ ನೋಡಿದಾಗ ರಾಜ್ಯದಲ್ಲಿ ವಿದ್ಯಾರ್ಥಿ ಸಂಘಟನೆಗಳು ರಾಜಕೀಯದ ಬೆನ್ನೆಲುಬುಗಳಾಗಿ ಕೆಲಸ ಮಾಡುತ್ತಿವೆ ಎಂದು ಹೇಳಿದರೆ ತಪ್ಪಾಗಲಾರದು. ರಾಜ್ಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು ಕೂಡ ವಿದ್ಯಾರ್ಥಿಗಳ ರಾಜಕೀಯ ಚಟುವಟಿಕೆಗಳ ಮೇಲೆ ಸಾಕಷ್ಟು ಪ್ರಭಾವ ಬೀರಿವೆ. 1975–77ರ ತುರ್ತುಪರಿಸ್ಥಿತಿಯ ಅವಧಿಯನ್ನು ಹೊರತುಪಡಿಸಿ ಉಳಿದೆಲ್ಲಸಂದರ್ಭಗಳಲ್ಲಿಯೂ ವಿದ್ಯಾರ್ಥಿ ಸಂಘಟನೆಗಳು ತುಂಬಾ ಸಕ್ರೀಯವಾಗಿರುವದನ್ನು ನಾವು ಕಾಣಬಹುದಾಗಿದೆ. ಈ ಕಾರಣಕ್ಕಾಗಿಯೇ ಇಂದು ವಿಧ್ಯಾರ್ಥಿಗಳು ವಿಶ್ವವಿದ್ಯಾಲಯದ ಸಿನೆಟನಲ್ಲಿ ಪ್ರತಿನಿಧಿತ್ವವನ್ನು ಪಡೆದಿದ್ದಾರೆ. ರಾಜ್ಯಶಾಸ್ತ್ರದ ಆಧುನಿಕ ಪರಿಕಲ್ಪನೆಗಳಾದ ಸ್ವಾತಂತ್ರ್ಯ, ಸಮಾಜವಾದ ಮತ್ತು ಸಮಾನತೆಯ ಮಹತ್ವವನ್ನು ಸಾಮಾನ್ಯ ಜನರಲ್ಲಿ ಈ ವಿದ್ಯಾರ್ಥಿ ಸಂಘಟನೆಗಳು ಮೂಡಿಸಿವೆ. ರಾಜಕೀಯ ಅಭಿವೃದ್ಧಿಮತ್ತು ಆಧುನೀಕರಣ ಪ್ರಕ್ರೀಯೆಯ ಅಧ್ಯಯನ ಮಾಡುವಾಗ ವಿಧ್ಯಾರ್ಥಿ ರಾಜಕೀಯುವನ್ನು ನಾವು ನಿರ್ಲಕ್ಷಿಸುವಂತಿಲ್ಲ. ಜಾಗತಿಕ ಮಟ್ಟದಲ್ಲಿ ಇಂದು ವಿಧ್ಯಾರ್ಥಿ ಕ್ರೀಯಾಶೀಲತೆಯು ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ. ಈ ಹಿನ್ನಲೆಯಲ್ಲಿ ವಿಧ್ಯಾರ್ಥಿ ಕ್ರಿಯಾಶೀಲತೆಯ ಬಗ್ಗೆ ಚರ್ಚಿಸುವದು ಇಲ್ಲಿ ಸೂಕ್ತ.

ಕ್ರಾಂತಿಕಾರಿ ಚಳವಳಿಗಳು ಯಾವತ್ತೂ ಆದರ್ಶಗಳನ್ನು ಹೊಂದಿರುವ ಹಾಗು ಅವುಗಳನ್ನು ಅನುಷ್ಠಾನಗೊಳಿಸಬೇಕೆಂಬ ಉತ್ಸಾಹದಲ್ಲಿರುವ ವಿಧ್ಯಾರ್ಥಿಗಳ ಬೆಂಬಲವನ್ನು ಬಯಸುತ್ತವೆ. ಅದಕ್ಕಾಗಿಯೇ ಸಿ. ರೈಟ್ ಮೀಲ್ಸ್ ಎಂಬ ವಿದ್ವಾಂಸರು "ಹೊಸ ಕ್ರಾಂತಿಕಾರಿ ಚಳವಳಿಗೆ ಬುದ್ಧಿಜೀವಿಗಳು ಹಾಗು ವಿಧ್ಯಾರ್ಥಿಗಳು ಮಾತ್ರ ಒಂದು ಭದ್ರವಾದ ಅಡಿಪಾಯ ಹಾಕುತ್ತಾರೆ" ಎಂದಿದ್ದಾರೆ. ಇವರ ವಿಚಾರಗಳಿಗೆ ಪೂರಕವಾಗಿ ಎಸ್.ಎಮ್.ಲಿಪ್‌ಸೆಟ್ "ಭವಿಷ್ಯತ್ತಿನ ರಾಜಕೀಯುವನ್ನು ವಿಶ್ಲೇಷಣೆ ಮಾಡುವಾಗ ವಿದ್ಯಾರ್ಥಿಗಳನ್ನು ಕಡೆಗಣಿಸುವುದು ಮಹಾ ಪ್ರಮಾದಕ್ಕೆ ದಾರಿ ಮಾಡಿ ಕೊಡುತ್ತದೆ"[1] ಎಂದು ಅಭಿಪ್ರಾಯ ಪಟ್ಟಿದ್ದಾರೆ. ಹಾಗೆಯೇ ಲೀಬ್‌ಮ್ಯಾನ್ ವಾಕರ್ ಮತ್ತು ಗ್ಲೇಜರ್ ಜಗತ್ತಿನಾದ್ಯಂತ ಶಾಂತಿ ಕದಡುವ, ಸಾಂಪ್ರದಾಯಿಕ ಮೌಲ್ಯಗಳನ್ನು ಹಾಗು ಅಸ್ತಿತ್ವದಲ್ಲಿರುವ ಸರಕಾರಗಳನ್ನು ಪ್ರಶ್ನಿಸುವ ಎರಡೇ ಎರಡು ಗುಂಪುಗಳೆಂದರೆ ಬುದ್ಧಿಜೀವಿಗಳು ಮತ್ತು ವಿದ್ಯಾರ್ಥಿಗಳು"[2] ಎಂದು ಸ್ಪಷ್ಟವಾಗಿ ತಿಳಿಸಿರುತ್ತಾರೆ.

1955ರಲ್ಲಿ ಅರ್ಜಂಟೀನಾದ ಪೆರೋನನ್ನು ಉರುಳಿಸುವಲ್ಲಿ, 1958ರಲ್ಲಿ ವೆನೆಜ್ಯುವೇಲಾದ ಪೆರೋಜ್ ಜೆಮೆನೇಜ್‌ನ ಅಧ:ಪತನ, 1963ರಲ್ಲಿ ವಿಯಟ್ನಾಂ ಮೇಲೆ ಅಮೇರಿಕೆಯ ದಾಳಿಯನ್ನು ಉಗ್ರವಾಗಿ ಪ್ರತಿಭಟಿಸಿದ್ದು, 1960ರಲ್ಲಿ ಜಪಾನ–ಅಮೇರಿಕೆಯ ಮಧ್ಯ ಆದ ಭದ್ರತಾ ಒಪ್ಪಂದದ ವಿರುದ್ಧದ ಪ್ರತಿಭಟನೆ, ಅದು ಕಿಶಿ ಸರಕಾರದ ಅಧ:ಪತನಕ್ಕು ಕಾರಣವಾಯಿತು, 1966ರಲ್ಲಿ ಸುಕಾರ್ನೊ ವಿರುದ್ಧ ಇಂಡೋನೇಷ್ಯಾದಲ್ಲಿನ ಚಳವಳಿ, 1969ರಲ್ಲಿ ಪಾಕಿಸ್ತಾನದಲ್ಲಿ ಅಯೂಬಖಾನನ ಅಧ:ಪತನ ಮತ್ತು ಜೇಕೊಸ್ಲಾವಾಕೀಯಾದಲ್ಲಿ ಉದಾರೀಕರಣಕ್ಕಾಗಿ ನಡೆದ ತೀವ್ರತರವಾದ ಚಳವಳಿಗಳಲ್ಲಿ ವಿಧ್ಯಾರ್ಥಿಗಳು ವಹಿಸಿದ ನಿರ್ಣಾಯಕ ಪಾತ್ರವೆ ಈ ಮೇಲಿನ ವಿದ್ವಾಂಸರ ಹೇಳಿಕೆಗಳಿಗೆ ಸಮರ್ಥನೆ ನೀಡುತ್ತವೆ.

ಒಂದು ಮಾತು ನಿಜ, ಬಹುಸಂಖ್ಯಾತ ವಿಧ್ಯಾರ್ಥಿಗಳು ಕ್ರಾಂತಿಕಾರಿ ಮನೋವೃತ್ತಿಯನ್ನು ಹೊಂದಿರುವದಿಲ್ಲ. ಎಲ್ಲಾ ದೇಶಗಳಲ್ಲಿಯು ಬಹುಸಂಖ್ಯಾತ ವಿಧ್ಯಾರ್ಥಿಗಳು ರಾಜಕೀಯುವಾಗಿ ಸೌಮ್ಯವಾದಿ ದೃಷ್ಟಿಕೋನವನ್ನು ಹೊಂದಿರುತ್ತಾರೆ. ಎಲ್ಲಾ ದೇಶಗಳಲ್ಲಿಯೂ, ಎಡಪಂಥೀಯ

ವಿಧ್ಯಾರ್ಥಿಗಳು ಅಲ್ಪಸಂಖ್ಯಾತರಾಗಿದ್ದು, ವೈಚಾರಿಕ ಕ್ರಾಂತಿಯನ್ನು ಹುಟ್ಟುಹಾಕುವಲ್ಲಿ ಮುಂಚೂಣಿಯಲ್ಲಿರುತ್ತಾರೆ. ಬಹುಸಂಖ್ಯಾತ ವಿಧ್ಯಾರ್ಥಿಗಳು ರಾಜಕೀಯ ವ್ಯವಹಾರಗಳ ಬಗ್ಗೆ ನಿರಾಸಕ್ತಿ ಹೊಂದಿದವರಾಗಿರುತ್ತಾರೆ.

ಎಸ್. ಎಂ. ಲಿಪ್‌ಸೆಟ್ ಮತ್ತು ಫಿಲೀಪ್ ಅಲ್ತಬಷ್ ರವರ ಪ್ರಕಾರ ಬಹಳಷ್ಟು ಸಲ ಕ್ಯಾಂಪಸ್ ಅವಸ್ಥೆಯು ಕೂಡ ರಾಜಕೀಯ ಚಟವಟಿಕೆಗಳಿಗೆ ಅವಕಾಶ ಒದಗಿಸಿಕೊಡುತ್ತದೆ. ವಿಧ್ಯಾರ್ಥಿಯ ಕೌಟುಂಬಿಕ ಹಿನ್ನಲೆ ಹಾಗು ಸಾಮಾಜಿಕ ಅಂತಸ್ತು ಬಹುಮುಖ್ಯ ಅಂಶಗಳಾದರೂ, ಅವರು ತಮ್ಮ ಸ್ನೇಹಿತರ ಸಂಪರ್ಕಕ್ಕೆ ಬಂದಾಗ ಈ ಅಂಶಗಳು ಗೌಣವಾಗುತ್ತವೆ. ತಮ್ಮ ವರ್ಗ ಮತ್ತು ಅಂತಸ್ತಿಕ್ಕಿಂತ ತಾವು ಆಯ್ಕೆಮಾಡಿಕೊಂಡ ವಿಶ್ವವಿದ್ಯಾಲಯ ಮತ್ತು ಶೈಕ್ಷಣಿಕ ಕ್ಷೇತ್ರ ಅತ್ಯಂತ ಮಹತ್ವದ್ದಾಗುತ್ತದೆ.[3] ಅದರಲ್ಲಿಯೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ವಿಧ್ಯಾರ್ಥಿಗಳು ವೈವಿಧ್ಯಮಯ ವಿಭಾಗಗಳಿಂದ ಬಂದವರಾದ್ದರಿಂದ ಅವರಲ್ಲಿ ಸಾಮೂದಾಯಿಕ ಪ್ರಜ್ಞೆ ಇರುವದಿಲ್ಲ. ಭಾರತದ ಮಟ್ಟಿಗೆ ಇದು ಅಕ್ಷರಶ: ನಿಜವೆಂದು ಹೇಳಬಹುದು.

ಆಯನ್ ರ್‍ಯಾಂಡ್ "ದಿ ನೀವ್ ಲೇಫ್ಟ್; ದಿ ಆಂಟಿ–ಇಂಡಸ್ಟ್ರಿಯಲ್ ರೆವ್ಯುಲ್ಯೂಶನ್" ಎಂಬ ಗ್ರಂಥದಲ್ಲಿ 1964ರ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಸಂಭವಿಸಿದ ಬರ್ಕ್ಲಿ ವಿಧ್ಯಾರ್ಥಿ ದಂಗೆ ಮತ್ತು 1968ರ ಫ್ರೆಂಚ್ ಸ್ಟುಡೆಂಟ್ ರಿವ್ಹೋಲ್ಟ್ ಎರಡೂ ಕೂಡ ಕ್ಯಾಂಪಸ್ ಅವಸ್ಥೆ, ವಿಶ್ವವಿದ್ಯಾಲಯದ ಸರ್ವಾಧಿಕಾರಿ ಧೋರಣೆ ಮತ್ತು ಅದರ ಅಸಮರ್ಪಕ ಆಡಳಿತ ವಿರುದ್ಧದ ಪ್ರತಿಭಟನೆಗಳಾಗಿದ್ದವು. ಆದರೆ ಈ ಎರಡು ಪ್ರತಿಭಟನೆಗಳು ಯಶಸ್ವಿ ಕ್ರಾಂತಿಗಳನ್ನಾಗಿ ಮಾರ್ಪಡಿಸುವಲ್ಲಿ ವಿಫಲವಾದವು. ಅಮೇರಿಕಾ ಮತ್ತು ಫ್ರಾನ್ಸಿನ ವಿಧ್ಯಾರ್ಥಿ ನಾಯಕರು ಸಂಗತಿಗಳಿಗೆ ಹೆಚ್ಚಿನ ಮಹತ್ವ ನೀಡಿದ್ದಾರೆ ಹೊರತು ತಾತ್ವಿಕತೆಗೆ ಅಲ್ಲ. ಸ್ವಾತಂತ್ರ್ಯದ ಕ್ರೀಯೆ ವಾಕ್ ಸ್ವಾತಂತ್ರ್ಯಕ್ಕಿಂತ ಬಹುಮುಖ್ಯವಾದದ್ದು. ವಿಶ್ವವಿದ್ಯಾಲಯಗಳು ವಿಧ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರಿಂದ ನಡೆಯಬೇಕು. ಆದರೆ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳು ಬಂಡವಾಳಶಾಹಿಗಳ ಅಡಿಯಾಳಾಗಿ ಕಾರ್ಯನಿರ್ವಹಿಸುತ್ತಿವೆ[4] ಎನ್ನುವದು ಅವರ ಭಾವನೆ.

ಎ. ಬೆಲ್ಡನ್ ಫೀಲ್ಡ್ಸ್ "ದ ರೆವ್ಯುಲ್ಯುಶನ್ ಬೆಟ್ರಾಯಿಡ್: ದ ಫ್ರೆಂಚ್ ಸ್ಟುಡೆಂಟ್ ರಿವ್ಹೋಲ್ಟ್ ಆಫ್ ಮೇ–ಜೂನ್ 1968" ಎಂಬ ಸಂಶೋಧನಾ ಲೇಖನದಲ್ಲಿ ಫ್ರೆಂಚ್ ವಿಧ್ಯಾರ್ಥಿ ನಾಯಕರು ಫ್ರಾನ್ಸಿನ ಶೈಕ್ಷಣಿಕ ವ್ಯವಸ್ಥೆಯಲ್ಲಿನ ಅಸಮಾನತೆಯನ್ನು ಉಗ್ರವಾಗಿ ಪ್ರತಿಭಟಿಸಿದರು. ಧಾರ್ಮಿಕ ವಿಭಜನೆ, ಪ್ರಾದೇಶಿಕತೆ, ಭಾಷೆ, ಜನಾಂಗೀಯತೆ ಮತ್ತು ಆದಿವಾಸಿ ಭಿನ್ನತೆಗಳು ವಿಧ್ಯಾರ್ಥಿ ಚಳವಳಿಗೆ ಕಾರಣಗಳಾದವು. ವಿಧ್ಯಾರ್ಥಿಗಳ ಮೇಲೆ ವಿಶ್ವವಿದ್ಯಾಲಯ ಹೇರಿದ ನಿರ್ಬಂಧನೆಗಳು ಅವರು ರಾಜಕೀಯದಲ್ಲಿ ಪಾಲ್ಗೊಳ್ಳಲು ಹಾಗು ಕ್ಯಾಂಪಸ್‌ನಲ್ಲಿ ರಾಜಕೀಯ ವಾತಾವರಣ ಹೆಚ್ಚಾಗಲು ಕಾರಣವಾದವು.[5] ಅದಕ್ಕಾಗಿ ಪರೀಕ್ಷಾ ವ್ಯವಸ್ಥೆಯು ವಿದ್ಯಾರ್ಥಿಗಳ ರಾಜಕೀಯ ಕ್ರಿಯಾಶೀಲತೆಯನ್ನು ನಿರ್ಧರಿಸುವ ಪ್ರಮುಖ ಅಂಶವಾಗಿದೆ. ಭಾರತದಲ್ಲಿ ವಿದ್ಯಾರ್ಥಿಗಳು ವರ್ಷದ ಕೊನೆಗೆ ಪರೀಕ್ಷೆ ಬರೆಯುವದರಿಂದ, ಅವರಿಗೆ ಸಾಕಷ್ಟು ಸಮಯ ಸಿಗುವದರಿಂದ ಅವರು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವದಕ್ಕೆ ಸಾಧ್ಯವಾಗುತ್ತದೆ.

ಎ. ಬೆಲ್ಡನ್ ಫೀಲ್ಡ್ಸ್ : ವಿಶ್ಲೇಷಣಾತ್ಮಕ ಉದ್ದೇಶಕ್ಕಾಗಿ ವಿದ್ಯಾರ್ಥಿ ಸಂಘಟನೆಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಿದ್ದಾರೆ. ಮೊದಲನೆಯದು ಸ್ಥಾಪಿತ ಅಧಿಕಾರ ಅಥವಾ ವ್ಯವಸ್ಥೆಯನ್ನು ವಿರೋಧಿಸುವ ಟ್ರಾನ್ಸ್‌ಗ್ರೆಸ್ಸಿವ್ ಗುಂಪಾದರೆ ಎರಡನೆಯದು ಸಾಮಾಜಿಕ ಮೌಲ್ಯಗಳನ್ನು ಪ್ರಶ್ನಿಸದೆ ಅವುಗಳನ್ನು ಪಾಲಿಸಿಕೊಂಡು ಹೋಗುವ ಸಾಂಪ್ರದಾಯಿಕ ಗುಂಪು. ಟ್ರಾನ್ಸ್‌ಗ್ರೆಸ್ಸಿವ್ ಗುಂಪು ಸಾಮಾಜಿಕ ಮೌಲ್ಯಗಳಲ್ಲಿ ಮೂಲಭೂತವಾದ ಬದಲಾವಣೆಗಳಾಗಬೇಕೆಂದು ಬಯಸುತ್ತದೆ. ಆದರೆ ಸಾಂಪ್ರದಾಯಿಕ ಗುಂಪು ಅಸ್ತಿತ್ವದಲ್ಲಿರುವ ಸಾಮಾಜಿಕ ಮೌಲ್ಯಗಳನ್ನು ಪ್ರಶ್ನಿಸದೇ ಯಥಾವತ್ತಾಗಿ ಪಾಲಿಸಿಕೊಂಡು ಹೋಗಲು ಪ್ರಯತ್ನಿಸುತ್ತದೆ. ಮೌಲ್ಯಗಳಲ್ಲಿನ ವ್ಯತ್ಯಾಸಗಳು ಸಂಘರ್ಷಕ್ಕೆ ದಾರಿ ಮಾಡಿಕೊಡುತ್ತವೆ.[6]

ಜಗತ್ತಿನಾದ್ಯಂತ ಇಂದು ಉನ್ನತ ಶಿಕ್ಷಣದ ಆವರಣಗಳು ಸಂಕ್ರಮಣ ಮತ್ತು ಪ್ರಕ್ಷುಬ್ಧ ಕಾಲದಲ್ಲಿವೆ. ಸಮಾಜ ವಿಜ್ಞಾನಿಗಳು ವಿದ್ಯಾರ್ಥಿ ಪ್ರತಿಭಟನೆಗೆ ಹಲವಾರು ವಿವರಣೆಗಳನ್ನು ನೀಡಿದ್ದಾರೆ. ಬೇಕ್ ಮತ್ತು ಡೊಗ್ಲಸ್ (1970) ಮಾನವ ಜೀವನದ ಎಲ್ಲ ಪ್ರಕಾರಗಳಲ್ಲಾದ ಜ್ಞಾನ ಸ್ಫೋಟವು ಅವನ ದೃಷ್ಟಿಕೋನವನ್ನು ತೀವ್ರವಾಗಿ ಬದಲಾಯಿಸಿತು. ಹೀಗಾಗಿ ವ್ಯಕ್ತಿ ಪ್ರತಿಯೊಂದನ್ನು ಪ್ರಶ್ನಿಸಲು ಪ್ರಾರಂಭಿಸಿದ. ಸಾಮಾನ್ಯ ಜನರ ದೃಷ್ಟಿಕೋನದಲ್ಲಾದ ಬದಲಾವಣೆ ಪ್ರತಿಭಟನೆಗೆ ಮೂಲ ಕಾರಣವಾಯಿತು ಎಂದು ಹೇಳಿದರೆ, ಮೋರಿಸ್ (1976) ರವರ ಪ್ರಕಾರ ಇದು ಕೇವಲ ಜ್ಞಾನದ ಪರಾಕಾಷ್ಠೆ ಮಾತ್ರವಲ್ಲ, ಹೊಸ ಜ್ಞಾನದ ಮಧ್ಯಸ್ಥಿಕೆಯು ಸಾಂಪ್ರದಾಯಿಕ ಮೌಲ್ಯಗಳು ಮತ್ತು ವ್ಯಕ್ತಿಯಂತರ್ಗತ ಸಂಬಂಧಗಳ ಮೇಲೆ ಪ್ರಬಲವಾದ ನಿರ್ಬಂಧ ಹೇರಿತು ಎಂದಿದ್ದಾರೆ. ಇನ್ನು ಪೋಪ್ಪಮ್: ಮನುಷ್ಯ ಇಂದು ಮುಕ್ತವಾಗಿದ್ದಾನೆ ಸಮಾಜಜೀವನದಲ್ಲಿ ಇಂದು ರಹಸ್ಯ ಮತ್ತು ನಿಯಂತ್ರಣಗಳು ಮಿಥ್ಯಗಳಾಗಿವೆ ಎಂದಿದ್ದಾರೆ. ರೋಲ್ವಿನ್ ಮತ್ತು ಸೀನಿ (1973) ಮನುಷ್ಯ ಇಂದು ಬಹಳ ಅನ್ವೇಷಣಾಶೀಲನಾಗಿದ್ದಾನೆ ಮತ್ತು ಮೂಲಭೂತ ಸಮಸ್ಯೆಗೂ ತಕ್ಷಣ ಪರಿಹಾರಕ್ಕಾಗಿ ಹಾತೊರೆಯುತ್ತಾನೆ ಎಂದಿದ್ದಾರೆ. ಈ ಮೇಲಿನ ಸಮಾಜ ವಿಜ್ಞಾನಿಗಳ ವಾದವೇನೆಂದರೆ, ದೃಷ್ಟಿಕೋನದಲ್ಲಾದ ಬದಲಾವಣೆ ಮತ್ತು ಸಮಾಜ ವ್ಯವಸ್ಥೆಯಲ್ಲಿ ವ್ಯಕ್ತಿಯ ಅಂತಸ್ತಿನಲ್ಲಾದ ಬದಲಾವಣೆ ಕ್ಯಾಂಪಸ್ ಅಶಾಂತಿಗೆ ಕಾರಣಗಳು [7] ಎಂದು ಗುರುತಿಸಿರುತ್ತಾರೆ.

ವಿದ್ಯಾರ್ಥಿ ಅಶಾಂತಿಗೆ ಮೇಲೆ ನೀಡಿದ ವಿವರಣೆಗಳು ಆ ದಿನಗಳಲ್ಲಿ ಯಥೋಚಿತವಾಗಿದ್ದವು. ಆದರೆ ಇಂದು ಇವುಗಳು ತಮ್ಮ ಪ್ರಸ್ತುತತೆಯನ್ನು ಕಳೆದುಕೊಂಡಿವೆ. ಅದಕ್ಕಾಗಿಯೇ ಈ ಸಾರ್ವತ್ರಿಕ ವಿದ್ಯಮಾನವನ್ನು ಅರ್ಥ ಮಾಡಿಕೊಳ್ಳಲು ಹೊಸ ವಿವರಣೆಗಳನ್ನು ಇಂದು ನೀಡಲಾಗುತ್ತಿದೆ. ಇಂದು ಪಶ್ಚಿಮ ದೇಶಗಳಲ್ಲಿ ವಿದ್ಯಾರ್ಥಿ ಅಶಾಂತಿಗೆ ಸಂಬಂಧಿಸಿದಂತೆ ಎರಡು ಸಿದ್ಧಾಂತಗಳು ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುತ್ತಿವೆ. ಮೊದಲನೆಯದು ತಲೆಮಾರು ಸಂಘರ್ಷ ಸಿದ್ಧಾಂತ. ಇದನ್ನು ಓಡಿಪಲ್ ರೆಬೆಲಿಯನ್ ಎಂದು ಕೂಡ ಕರೆಯಲಾಗುತ್ತದೆ. ಈ ಸಿದ್ಧಾಂತವನ್ನು ಪ್ರತಿಪಾಸಿದವರು ಲೆವಿಸ್ ಎಸ್. ಫೆವರರ್. ಎರಡನೆಯದು ಐತಿಹಾಸಿಕ ಅಪ್ರಾಸಂಗಿಕ ಸಿದ್ಧಾಂತ. ಈ ಸಿದ್ಧಾಂತವನ್ನು ಜೆಬ್ನಿವ್ ಬ್ರೆಜ್ನಿಸ್ಕಿ ಮತ್ತು ಡೇನಿಯಲ್ ಬೆಲ್ ಪ್ರತಿಪಾದಿಸಿದ್ದಾರೆ. ಒಡಿಪಲ್ ರೆಬೆಲಿಯನ್ ಸಿದ್ಧಾಂತವು ಸಾಮಾನ್ಯವಾಗಿ ಹಳೆ ತಲೆಮಾರಿನವರು ವಿದ್ಯಾರ್ಥಿಗಳನ್ನು ದ್ವೇಷಿಸುವದರಿಂದ ಇದು ವಿದ್ಯಾರ್ಥಿ ಪ್ರತಿಭಟನೆಗೆ ದಾರಿ ಮಾಡಿಕೊಡುತ್ತದೆ ಎಂದು ಪ್ರತಿಪಾದಿಸುತ್ತದೆ. ಐತಿಹಾಸಿಕ ಅಪ್ರಾಸಂಗಿಕ ಸಿದ್ಧಾಂತವು ಪ್ರಸ್ತುತ ಸಮಾಜವು ನಮ್ಮನ್ನು ನಿರ್ಲಕ್ಷಿಸುತ್ತಿದೆ ಎನ್ನುವ ಭಾವನೆ ವಿದ್ಯಾರ್ಥಿಗಳಲ್ಲಿ ಮೂಡುವದರಿಂದ ಅವರು ಪ್ರತಿಭಟನೆಯಲ್ಲಿ ತೊಡಗುತ್ತಾರೆ ಎಂದು ಪ್ರತಿಪಾದಿಸುತ್ತದೆ. ಮೊದಲನೆಯ ಸಿದ್ಧಾಂತವು ವಿದ್ಯಾರ್ಥಿಗಳ ಅಶಾಂತಿಗೆ ಮಾನಸಿಕ ಕಾರಣಗಳನ್ನು ಪರಿಗಣಿಸಿದರೆ ಎರಡನೆಯ ಸಿದ್ಧಾಂತವು ಸಾಮಾಜಿಕ ಕಾರಣಗಳಿಗೆ ಹೆಚ್ಚು ಒತ್ತು ನೀಡಿದೆ.[8]

ಆದರೆ ವಿದ್ಯಾರ್ಥಿ ಚಳವಳಿಯ ತಜ್ಞರಾದ ಕೆನೇಥ್ ಕೇನಿಸ್ಟನ್ ಈ ಮೇಲಿನ ಎರಡು ಸಿದ್ಧಾಂತಗಳನ್ನು ಅಲ್ಲಗಳೆಯುತ್ತಾರೆ. ಅವರು ವಿದ್ಯಾರ್ಥಿ ಅಶಾಂತಿಗೆ ಬೇರೆ ಕಾರಣಗಳನ್ನೇ ನೀಡುತ್ತಾರೆ. "ಧೋರಣೆಗಳನ್ನು ಅಥವಾ ನೀತಿಗಳನ್ನು ರೂಪಿಸುವಾಗ ಹಾಗು ಕಾರ್ಯಕ್ರಮಗಳನ್ನು ರಚಿಸುವಾಗ ತಮ್ಮ ಪಾಲನ್ನು ಇಂದು ವಿದ್ಯಾರ್ಥಿಗಳು ಕೇಳುತ್ತಿದ್ದಾರೆ ಅಲ್ಲದೆ ಆಧುನಿಕ ಸಮಾಜವು

ತಾರುಣ್ಯಾವಸ್ಥೆಯನ್ನು ಬೆಳವಣಿಗೆಯ ಒಂದು ವಿಶಿಷ್ಟ ಹಂತವೆಂದು ಒಪ್ಪಿಕೊಂಡಿದೆ, ಅಲ್ಲದೆ ಸಾಮಾನ್ಯವಾಗಿ ಸಮಾಜ ಜೀವನದ ಹಂತಗಳನ್ನು ವ್ಯಾಖ್ಯಾನಿಸುವುದಕ್ಕೂ ಮತ್ತು ಅದರ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಲಕ್ಷಣಗಳ ನಡುವೆ ಒಂದು ನಿಕಟವಾದ ಸಂಬಂಧವಿದೆ" ಎನ್ನುತ್ತಾರೆ. ಹೀಗಾಗಿ ನಮ್ಮ ಮಕ್ಕಳಿಗೆ ಯೋಗ್ಯವಾದ ಶಿಕ್ಷಣವನ್ನು ನೀಡಿ ಅವರನ್ನು ಜವಾಬ್ದಾರಿಯುತ ನಾಗರಿಕರನ್ನಾಗಿ ತಯಾರು ಮಾಡುವುದರ ಮುಖಾಂತರ ಸಮಾಜದಲ್ಲಿ ಸಂಭವಿಸುವ ವಿದ್ಯಮಾನಗಳ ವಿಮರ್ಶಾತ್ಮಕ ಮೌಲ್ಯ ಮಾಪನ ಮಾಡುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಅನುವು ಮಾಡಿಕೊಡಬೇಕು.[9]

ಆದರೆ ಎಡ್ವರ್ಡ ಶಿಲ್ಸ್ ಅವರು ತಮ್ಮ "ಡ್ರೀಮ್ಸ್ ಆಫ್ ಪ್ಲಾನಿಟ್ಯೂಡ್ ನೈಟ್ಮೇರ್ಸ್ ಆಫ್ ಸ್ಕೇರ್ಸಿಟಿ" ಎಂಬ ಲೇಖನದಲ್ಲಿ ವಿದ್ಯಾರ್ಥಿ ಸಂಘರ್ಷಕ್ಕೆ ಬೇರೆ ಕಾರಣವನ್ನೇ ನೀಡುತ್ತಾರೆ. ಅವರ ಪ್ರಕಾರ "ವಿಶ್ವವಿದ್ಯಾಲಯದ ಮೌಲ್ಯಗಳು ಮತ್ತು ಸಮಾಜದ ಮೌಲ್ಯಗಳ ನಡುವೆ ಸಂಘರ್ಷವಿದೆ. ಸಮಾಜದ ಒಂದು ಮಾದರಿಯಾಗಿ ವಿಶ್ವವಿದ್ಯಾಲಯವಿರಬೇಕೆಂದು ಎಲ್ಲರೂ ಬಯಸುತ್ತಾರೆ. ವಿಶ್ವವಿದ್ಯಾಲಯ ಸಾರ್ವತ್ರಿಕತೆಯ ಮತ್ತು ಮೆರಿಟೋಕ್ರ್ಯಾಟಿಕ್ ಗುಣಗಳನ್ನು ಹೊಂದಿದ್ದರೆ ಸಮಾಜ ಈ ಗುಣಗಳನ್ನು ಹೊಂದಿರುವದಿಲ್ಲ. ಇದು ವಿಶ್ವವಿದ್ಯಾಲಯದ ಮೌಲ್ಯಗಳು ಮತ್ತು ಸಮಾಜ ಮೌಲ್ಯಗಳ ನಡುವಿನ ಸಂಘರ್ಷಕ್ಕೆ ಅವಕಾಶ ಮಾಡಿಕೊಡುತ್ತದೆ"[10] ಎಂದಿದ್ದಾರೆ.

ಭಾರತದಲ್ಲಿ ವಿಧ್ಯಾರ್ಥಿ ಚಳವಳಿಗೆ ಸಂಬಂದಿಸಿದಂತೆ ಬೇರೆ ಬೇರೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಾಗಿದೆ. ಕೆಲವರು ಭಾರತದಲ್ಲಿ ಅಂಥಹ ಚಳವಳಿ ಅಸ್ತಿತ್ವದಲ್ಲಿದೆಯೇ? ಎಂದು ಪ್ರಶ್ನಿಸುತ್ತಾರೆ. ಎಡ್ವರ್ಡ ಶೀಲ್ಸ್ "ಸ್ಟುಡೆಂಟ್ ಪೊಲಿಟಿಕ್ಸ್ ಅಂಡ್ ಯುನಿವರ್ಸಿಟೀಸ್" ಎಂಬ ಲೇಖನದಲ್ಲಿ "ಮೇಲಿಂದ ಮೇಲೆ ಗಲಭೆಯಾಗದೆ, ನಿಜವಾದ ಅರ್ಥದಲ್ಲಿ ಒಂದು ಚಳವಳಿಯೆನಿಸಿಕೊಳ್ಳಬೇಕಾದರೆ ಅಲ್ಲಿ ಒಂದು ಸಿಧ್ಧಾಂತ ಇರಲೇಬೇಕು. ಸಿಧ್ಧಾಂತ ಮತ್ತು ಚಳವಳಿಗಳೂ ವ್ಯವಸ್ಥೆ ಅಥವಾ ಸಂಸ್ಥೆಗಳಿಗಾಗಿ ಇರುವಂಥವುಗಳೇ ಹೊರತು ಪ್ರಾಸಂಗೀಕ ಮತ್ತು ನಿರ್ದಿಷ್ಟ ಕುಂದುಕೊರತೆಗಳಿಗಾಗಿ ಇರುವಂಥಹುಗಳಲ್ಲ" ವೆಂದಿದ್ದಾರೆ. ಒಂದು ಸರಳ ಸತ್ಯವೆನೆಂದರೆ ಭಾರತದಲ್ಲಿ ವಿಧ್ಯಾರ್ಥಿಗಳು ಸುಧಾರಣೆಗಳಿಗಾಗಿ ಪ್ರತಿಭಟಿಸುವದಿಲ್ಲ. ಅವರು ಯಾವುದೇ ದೂರಗಾಮಿ ಉದ್ದೇಶಗಳನ್ನು ಹೊಂದಿರುವದಿಲ್ಲ. ವಿಧ್ಯಾರ್ಥಿಗಳು ವಿಶ್ವವಿದ್ಯಾಲಯದ ಉಪಕುಲಪತಿಯ ಮೇಲೆ ಹಲ್ಲೆ ಮಾಡುತ್ತಾರೆ ಆದರೆ ಅವರ ಅಧಿಕಾರ ಕಡಿತಗೊಳಿಸಬೇಕೆಂದು ಪ್ರತಿಭಟಿಸುವದಿಲ್ಲ. ಹಾಗೆಯೇ ಪೊಲೀಸ್ ಮೇಲೆ ಆಕ್ರಮಣ ಮಾಡುತ್ತಾರೆ ಆದರೆ ಪೊಲೀಸ್ ಕಾರ್ಯವಿಧಾನದ ಬದಲಾವಣೆಗಾಗಿ ಹೋರಾಟ ಮಾಡುವದಿಲ್ಲ. ಬಂಡಾಯ ವಿಧ್ಯಾರ್ಥಿಗಳು ಪ್ರಭುತ್ವದ ಕುರಿತು ಗೌರವ ಇಟ್ಟುಕೊಂಡಿರುವದಿಲ್ಲ. ಏಕೆಂದರೆ ವ್ಯವಸ್ಥೆ ಭ್ರಷ್ಟ ಮತ್ತು ಅಸಮರ್ಥವಾಗಿದೆ ಎನ್ನುವದು ಅವರ ಭಾವನೆ. ಹಿಗಾಗಿ ಪ್ರಭುತ್ವ ವಿಧ್ಯಾರ್ಥಿಗಳ ಸಮಸ್ಯೆಗಳನ್ನು ಪರಿಹರಿಸುವ ಬದಲು ಅವುಗಳಿಂದ ದೂರ ಉಳಿಯಲು ಪ್ರಯತ್ನಿಸುತ್ತದೆ. ಇದರ ಒಟ್ಟು ಫಲಿತಾಂಶವೆನೆಂದರೆ ವಿಧ್ಯಾರ್ಥಿ ಪ್ರತಿಭಟನೆಯು ವಿಧ್ಯಾರ್ಥಿ ಚಳವಳಿಯಾಗಿ ರುಪುಗೊಳ್ಳುವಲ್ಲಿ ವಿಫಲವಾಗುತ್ತದೆ. ವ್ಯವಸ್ಥೆಯ ಬದಲಾವಣೆ ಈ ಪ್ರತಿಭಟನೆಗಳಿಂದ ಸಾಧ್ಯವಾಗುವದಿಲ್ಲ.

ಈ ಮೇಲಿನ ವಾದದಲ್ಲಿ ಸತ್ಯಾಂಶವಿದ್ದರೂ, ಭಾರತದಲ್ಲಿ ವಿಧ್ಯಾರ್ಥಿ ಚಳವಳಿಗಳೇ ನಡೆಯಲಿಲ್ಲ ಎಂದು ಹೇಳಿದರೆ ತಪ್ಪಾಗುತ್ತದೆ. ಇಂದು ವಿಧ್ಯಾರ್ಥಿಗಳು ತೀವ್ರ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯಲ್ಲಿ ಸಿಲುಕಿಕೊಂಡಿದ್ದಾರೆ. ಭಾರತದ ನಿಜವಾದ ಸಮಸ್ಯೆ ವಿಧ್ಯಾರ್ಥಿ ಅಶಿಸ್ತು, ಭ್ರಷ್ಟಾಚಾರ ಅಥವಾ ಪಕ್ಷ ರಾಜಕೀಯವಲ್ಲ. ನಿಜವಾದ ಸಮಸ್ಯೆ ಆಳವಾಗಿ ಬೇರುರಿರುವುದು ಸಮಾಜ ಬದಲಾವಣೆಯಲ್ಲಿ. ದೇಶದಲ್ಲಿ ವಿಧ್ಯಾರ್ಥಿ ಚಳವಳಿಯು ರಾಷ್ಟ್ರೀಯ ಚಳವಳಿಯ ಭಾಗವಾಗಿರುವದನ್ನು ನಾವು ಇಲ್ಲಿ ನೆನಪಿಸಿಕೊಳ್ಳಬೇಕು. 1942 ಭಾರತ ಬಿಟ್ಟು ತೊಲಗಿ ಚಳವಳಿಯು ವಿಧ್ಯಾರ್ಥಿ ಕ್ರಿಯಾಶೀಲತೆಗೆ ತಕ್ಕ ಉದಾಹರಣೆಯಾಗಿದೆ.

ಕಳೆದ ಶತಮಾನ, ಭಾರತದಲ್ಲಿ ವಿಧ್ಯಾರ್ಥಿ ಚಳವಳಿಯೂ ಬೇರೆ ಬೇರೆ ಹಂತಗಳಲ್ಲಿ ವಿಕಾಸಗೊಂಡಿದೆ. 19ನೇ ಶತಮಾನದ ಮೊದಲ ಅರ್ಧ ಭಾಗದಲ್ಲಿ ಭಾರತದಲ್ಲಿ ಅನೇಕ ಸಾಮಾಜಿಕ ಸುಧಾರಣೆಯ ಚಳುವಳಿಗಳು ನಡೆದಿದ್ದು, ಅದರಲ್ಲಿ ವಿಧ್ಯಾರ್ಥಿಗಳೂ ಭಾಗವಹಿಸಿದ್ದರು. ಸಮಾಜ ಸುಧಾರಣೆಯ ಉದ್ದೇಶವನ್ನು ಇಟ್ಟುಕೊಂಡು ವಿಧ್ಯಾರ್ಥಿಗಳು ಸಂಘಟನೆಗಳನ್ನು ಸ್ಥಾಪಿಸಿಕೊಂಡರು. 1857ರ ಸಿಪಾಯಿ ದಂಗೆಯ ನಂತರ, ಭಾರತೀಯ ಸಮಾಜದಲ್ಲಿ ರಾಜಕೀಯ ಪ್ರಜ್ಞೆ ಜಾಗ್ರತವಾಯಿತು ಮತ್ತು ವಿದ್ಯಾರ್ಥಿ ಸಮುದಾಯವು ಅದರಿಂದ ಪ್ರಭಾವಿತವಾಯಿತು. 1875ರಲ್ಲಿ ಆನಂದ ಮೋಹನ ಭೋಸ್ ಎಂಬುವವರು 'ಸ್ಟುಡೆಂಟ್ ಅಸೋಸಿಯೇಷನ್' ಎಂಬ ವಿದ್ಯಾರ್ಥಿ ಸಂಘಟನೆಯನ್ನು ಸ್ಥಾಪಿಸಿದರು. ಆ ಸಮಯದಲ್ಲಿ ಮೆಟ್ರೋ ಪಾಲಿಟನ್ ಕಾಲೇಜಿನ ಅಧ್ಯಾಪಕರಾದ ಸುರೇಂದ್ರನಾಥ ಬ್ಯಾನರ್ಜಿ ರಾಷ್ಟ್ರದ ಹಿತ ದೃಷ್ಟಿಯಿಂದ ವಿದ್ಯಾರ್ಥಿ ಸಮುದಾಯದಲ್ಲಿ ರಾಜಕೀಯ ಪ್ರಜ್ಞೆ ಮೂಡಿಸಲು ಪ್ರಯತ್ನಿಸಿದರು. ನಂತರ 1893ರಲ್ಲಿ ಅಶುತೋಷ ಮುಖರ್ಜಿಯವರ ನಾಯಕತ್ವದಲ್ಲಿ ವಿದ್ಯಾರ್ಥಿಗಳು ಸುರೇಂದ್ರನಾಥ ಬ್ಯಾನರ್ಜಿಯವರ ನ್ಯಾಯ ವಿಚಾರಣೆಯನ್ನು ವಿರೋಧಿಸಿ ಸಂಪು ಹೂಡಿದರು. 1885ರಲ್ಲಿ ಸ್ಥಾಪಿತವಾದ ರಾಷ್ಟ್ರೀಯ ಕಾಂಗ್ರೆಸಿನ ಮೃದು ಧೋರಣೆಗಳಿಗೆ ಬಂಗಾಳದ ಯುವಕರು ಅದರಲ್ಲೂ ವಿದ್ಯಾರ್ಥಿಗಳು ಅತೃಪ್ತರಾಗಿದ್ದರು. ಕ್ರಾಂತಿಕಾರಿ ಮಾರ್ಗದಿಂದ ಮಾತ್ರ ದೇಶದ ಸ್ವಾತಂತ್ರ್ಯ ಗಳಿಸಬಹುದು[11] ಎಂದು ಅವರು ಬಲವಾಗಿ ನಂಬಿದ್ದರು. 1905ರಲ್ಲಿ ಬ್ರಿಟಿಷರು ಬಂಗಾಳವನ್ನು ಧರ್ಮದ ನೆಲೆಯಲ್ಲಿ ವಿಭಜಿಸುವುದನ್ನು ವಿದ್ಯಾರ್ಥಿಗಳು ಉಗ್ರವಾಗಿ ಪ್ರತಿಭಟಿಸಿದರು. ಬಂಗಾಳ ವಿಭಜನೆ ವಿರೋಧದ ಹೋರಾಟ 20ನೇ ಶತಮಾನದ ವಿದ್ಯಾರ್ಥಿ ಕ್ರೀಯಾಶೀಲತೆಯ ಮಹಾ ಸಾಧನೆ ಅಥವಾ ಹೆಗ್ಗುರುತು ಎಂದು ಪರಿಗಣಿಸಲಾಗಿದೆ. ಕಲ್ಕತ್ತಾ ಈಡನ್ ಹಿಂದೂ ಹಾಸ್ಟೆಲಿನ ವಿದ್ಯಾರ್ಥಿಗಳು ಲಾರ್ಡ ಕರ್ಜನ್‌ರವರ ಪ್ರತಿಕೃತಿಯನ್ನು ದಹಿಸಿದರಲ್ಲದೆ, ಪರೀಕ್ಷೆಗಳನ್ನು ಬಹಿಷ್ಕರಿಸಿ ಪ್ರತಿಭಟಿಸಿದರು.[12] ಬಂಗಾಳ ವಿಭಜನೆ ವಿರೋಧಿ ಚಳುವಳಿಯೂ ವಿದ್ಯಾರ್ಥಿಗಳ ಸಕ್ರೀಯ ಭಾಗವಹಿಸುವಿಕೆಯಿಂದ ಒಂದು ಸ್ಪಷ್ಟ ಸ್ವರೂಪ ಪಡೆದುಕೊಂಡಿತ್ತು.

ಇನ್ನು ಭಾರತೀಯ ವಿದ್ಯಾರ್ಥಿಗಳು ದೇಶದ ಸ್ವಾತಂತ್ರ್ಯ ಚಳವಳಿಗೆ ಅರ್ಥ ಪೂರ್ಣವಾದ ಕೊಡುಗೆಯನ್ನು ನೀಡಿದ್ದಾರೆ. ಬಾಲ ಗಂಗಾಧರ ತಿಲಕ ಮತ್ತು ಮಹಾತ್ಮ ಗಾಂಧೀಯವರ ನೇತ್ರತ್ವದಲ್ಲಿ ವಿದ್ಯಾರ್ಥಿ ಸಮುದಾಯ ಮಾಸ್ ಪೊಲಿಟಿಕ್ಸ್‌ಗೆ ತನ್ನದೆ ಆದ ಕೊಡುಗೆಯನ್ನು ನೀಡಿದೆ. ಭಾರತದ ವಿದ್ಯಾರ್ಥಿಗಳು 1917ರಲ್ಲಿ ರಷಿಯಾದಲ್ಲಿ ಸಂಭವಿಸಿದ ಅಕ್ಟೋಬರ್ ಕ್ರಾಂತಿಯಿಂದ ತುಂಬಾ ಪ್ರಭಾವಿತಕ್ಕೊಳಗಾಗಿದ್ದರು. ಅಷ್ಟೇ ಅಲ್ಲದೆ ಯುರೋಪಿನ ವಿಚಾರಧಾರೆಗಳಿಂದಲೂ ಸಾಕಷ್ಟು ಪ್ರಭಾವಕ್ಕೊಳಗಾಗಿ ಉದಾತ್ತ ಕಾರಣಗಳಿಗಾಗಿ ಹೋರಾಡಲು ಕಂಕಣ ಬದ್ಧರಾದರು. ಇದಕ್ಕೆ 1920ರ ಅಸಹಕಾರ ಚಳುವಳಿ, 1919ರ ಜಾಲಿಯನ್ ವಾಲಾಬಾಗ್ ಹತ್ಯಾಕಾಂಡ ಮತ್ತು 1942ರ ಭಾರತ ಬಿಟ್ಟು ತೊಲಗಿ ಚಳುವಳಿಗಳೆ ಸಾಕ್ಷಿ. ವಿದ್ಯಾರ್ಥಿ ಸಮುದಾಯದ ರಾಜಕೀಯ ಜೀವನಕ್ಕೆ ಈ ಚಳುವಳಿಗಳು ಹೊಸ ತಿರುವು ನೀಡಿದವು. ರಾಷ್ಟ್ರೀಯ ಕಾಂಗ್ರೆಸ್ಸಿನ ನಾಯಕರು ಬಹಿರಂಗವಾಗಿ ವಿದ್ಯಾರ್ಥಿಗಳು ಚಳುವಳಿಯಲ್ಲಿ ಭಾಗವಹಿಸುವಂತೆ ಕರೆ ನೀಡಿದರು. ಅಷ್ಟೇ ಅಲ್ಲದೆ ಕಾಂಗ್ರೆಸ್ಸಿನ ನಾಯಕರು ಬಂಧನಕ್ಕೊಳಗಾದಾಗ, ವಿದ್ಯಾರ್ಥಿಗಳು ಚಳುವಳಿಯ ನಾಯಕತ್ವವನ್ನು ವಹಿಸಿಕೊಂಡರು. ಅಸಹಕಾರ ಚಳುವಳಿಯು

ಭಾರತದಲ್ಲಿ 'ನ್ಯಾಷನಲ್ ಸ್ಟುಡೆಂಟ್ ಫೆಡರೆಷನ್' ಎಂಬ ಸಂಘಟನೆ ರಚಿಸಲು ಪ್ರಚೋದಿಸಿತ್ತು. ಮೊಟ್ಟ ಮೊದಲ ಬಾರಿಗೆ ಅಖಿಲ ಭಾರತ ಕಾಲೇಜು ವಿದ್ಯಾರ್ಥಿಗಳ ಸಮ್ಮೇಳನವನ್ನು ಲಾಲಾ ಲಜಪತರಾಯ್ ಅವರ ಅಧ್ಯಕ್ಷತೆಯಲ್ಲಿ 1920ರಲ್ಲಿ ನಾಗಪೂರದಲ್ಲಿ ಸಂಘಟಿಸಲಾಯಿತು. ಇದೇ ವೇಳೆಗೆ ಪ್ರಾದೇಶಿಕ ವಿದ್ಯಾರ್ಥಿ ಸಂಘಟನೆಗಳು ಅಸ್ತಿತ್ವಕ್ಕೆ ಬಂದವು. ಈ ವಿದ್ಯಾರ್ಥಿ ಸಮ್ಮೇಳನಗಳ ಅಧ್ಯಕ್ಷತೆಯನ್ನು ಆಗಿನ ಪ್ರಮುಖ ವ್ಯಕ್ತಿಗಳಾದ ಲಾಲಾ ಲಜಪತರಾಯ್, ಸರೋಜಿನಿ ನಾಯ್ಡು, ಭಗವಾನದಾಸ, ಸಿ.ಆರ್.ದಾಸ್. ಮತ್ತು ಜವಹರಲಾಲ ನೆಹರು ವಹಿಸಿದ್ದರು ಎಂಬುದು ಗಮನಾರ್ಹವಾದ ವಿಷಯ. "ಆ ಅವಧಿಯಲ್ಲಿ ಭಾರತದ ರಾಜಕೀಯ ಜೀವನದಲ್ಲಿ ವಿದ್ಯಾರ್ಥಿ ಚಳುವಳಿಯು ಅತ್ಯಂತ ಮಹತ್ವವಾದ ಮೂಲಾಂಶವಾಗಿತ್ತು"[13]ಎಂದು ಅಲ್ತಬಷ್ ಜಿ ಫೀಲಿಫ್ ಅಭಿಪ್ರಾಯ ಪಡುತ್ತಾರೆ.

1930ರ ಸವಿನಯ ಅವಿಧೇಯತೆ ಚಳುವಳಿಯ ಪರಿಣಾಮವೆನೆಂದರೆ 1936ರಲ್ಲಿ ಆಲ್ ಇಂಡಿಯಾ ಸ್ಟುಡೆಂಟ್ ಫೆಡರೆಷನ್ ರಚನೆಗೆ ಅವಕಾಶ ಮಾಡಿಕೊಟ್ಟಿತು. ಈ ಸಂಘಟನೆಯ ಮೊದಲ ಸಮ್ಮೇಳನವನ್ನು ಲಕ್ನೋದಲ್ಲಿ ಆಯೋಜಿಸಲಾಯಿತು. ಪಂಡಿತ ಜವಾಹರಲಾಲ ನೆಹರು ಸಮ್ಮೇಳನದಲ್ಲಿ ಮಾತನಾಡಿ ರಾಷ್ಟ್ರೀಯ ಚಳುವಳಿಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದು ಅವರ ಪವಿತ್ರ ಕರ್ತವ್ಯವಾಗಿದೆ. ಪ್ರೋಲೆಟರಿಯನ್ ಕಾರ್ಮಿಕರ ಜೊತೆಗೂಡಿ ವಿದ್ಯಾರ್ಥಿಗಳು ರಾಷ್ಟ್ರೀಯ ಚಳುವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಬೇಕೆಂದು ಅವರು ಕರೆ ನೀಡಿದರು. ೧೯೩೬ ಮೊಟ್ಟ ಮೊದಲ ಬಾರಿಗೆ ಕಾಂಗ್ರೆಸ್ ಸರ್ಕಾರವಿರುವ ಏಳು ರಾಜ್ಯಗಳಲ್ಲಿ ತನ್ನ ಕೆಲವು ಶೈಕ್ಷಣಿಕ ಬೇಡಿಕೆಗಳನ್ನು ಮುಂದೆ ಇಟ್ಟಿತ್ತು. ಅವುಗಳೆಂದರೆ 1) ಶೈಕ್ಷಣಿಕ ಶುಲ್ಕ ಕಡಿತ ಮಾಡುವುದು. 2) ಪುಕ್ಕಟೆ ಮತ್ತು ಕಡ್ಡಾಯ ಶಿಕ್ಷಣ ನೀಡುವುದು. 3) ಪಠ್ಯ ಪುಸ್ತಕಗಳಿಂದ ರಾಷ್ಟ್ರ ವಿರೋಧಿ ವಿಚಾರಗಳನ್ನು ತೆಗೆದು ಹಾಕುವುದು 4) ದೇಶಿಯ ಭಾಷೆಗಳಲ್ಲಿ ಶಿಕ್ಷಣ ನೀಡುವುದು 5) ವಿಶ್ವವಿದ್ಯಾಲಯಗಳು ವಿದ್ಯಾರ್ಥಿ ಸಂಘಟನೆಗಳಿಗೆ ಮಾನ್ಯತೆ ನೀಡುವುದು 6) ವಿಶ್ವವಿದ್ಯಾಲಯ ಆಢಳಿತ ಮಂಡಳಿಯಲ್ಲಿ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯ ನೀಡುವುದು ಮತ್ತು 7) ಕೋಮುವಾದಿ ವಿದ್ಯಾರ್ಥಿ ಸಂಘಟನೆಗಳನ್ನು ನಿಷೇಧಿಸುವುದು.[14] ಇಲ್ಲಿ ಒಂದು ಗಮನಿಸಬೇಕಾದ ವಿಷಯವೆನೆಂದರೆ ೧೯೩೬ ಆ ಸಮಯದಲ್ಲಿಟ್ಟ ಬೇಡಿಕೆಗಳು ಮುಂದೆ ದೇಶ ಸ್ವಾತಂತ್ರ್ಯವಾದ ಮೇಲೆ ಅದರ ಕೆಲವು ವಿಚಾರಗಳನ್ನು ಸಂವಿಧಾನದಲ್ಲಿ ಅಳವಡಿಸಿರುವುದು ವಿದ್ಯಾರ್ಥಿ ಸಂಘಟನೆಗಳ ಸಾಧನೆಗೆ ಹಿಡಿದ ಕನ್ನಡಿ ಎಂದು ಹೇಳಬಹುದು. 1930ರಲ್ಲಿ ಧರ್ಮದ ಆಧಾರದ ಮೇಲೆ ಹಿಂದೂ ಸ್ಟುಡೆಂಟ್ ಫೆಡರೆಷನ್ ಸ್ಥಾಪಿಸಲಾಯಿತು. ಈ ಸಂಘಟನೆಗೆ ಪ್ರತಿಯಾಗಿ 1937ರಲ್ಲಿ ಮುಸ್ಲಿಂ ಸ್ಟುಡೆಂಟ್ ಫೆಡರೆಷನ್ ರಚಿಸಲಾಯಿತು. ವಿದ್ಯಾರ್ಥಿ ಸಮುದಾಯವು ಧರ್ಮದ ಆಧಾರದ ಮೇಲೆ ವಿಭಜನೆ ಆದದ್ದು ಈ ದೇಶದ ದುರಂತವೆಂದೆ ಹೇಳಬಹುದು. ಅಷ್ಟೇ ಅಲ್ಲದೆ ಕೋಮುವಾದಿ ನೆಲೆಯಲ್ಲಿ ವಿದ್ಯಾರ್ಥಿ ಸಮುದಾಯವು ವಿಭಜನೆಯಾದುದ್ದು ರಾಷ್ಟ್ರೀಯ ಮತ್ತು ವೈಚಾರಿಕ ವಿದ್ಯಾರ್ಥಿ ಸಂಘಟನೆಗಳಿಗೆ[15] ದೊಡ್ಡ ಹೊಡೆತ ನೀಡಿತ್ತು.

ದೇಶ ಸ್ವಾತಂತ್ರ್ಯಗಳಿಸಿದ ನಂತರ, ವಿಧ್ಯಾರ್ಥಿ ಚಳುವಳಿಯೂ ತನ್ನ ತೀವ್ರತೆಯನ್ನು ಕಳೆದುಕೊಂಡಿತ್ತು. ಸ್ವಾತಂತ್ರ್ಯ ನಂತರ, ವಿಧ್ಯಾರ್ಥಿ ಚಳುವಳಿಯಲ್ಲಿ ಸಾಕಷ್ಟು ಗಮನಾರ್ಹವಾದ ಬದಲಾವಣೆಗಳಾದವು[16] ಎಂದು ಅಲ್ ಬಷ್ ಅಭಿಪ್ರಾಯಪಟ್ಟರೆ ಹಜಾರೆಯವರು "ಸ್ವಾತಂತ್ರ್ಯ ನಂತರ ವೈಚಾರಿಕ ರಾಜಕೀಯ ಕ್ಷೀಣಿಸುವಿಕೆಯಿಂದ ಕ್ಯಾಂಪಸ್ ರಾಜಕೀಯಕ್ಕೆ ದಾರಿ ಮಾಡಿಕೊಟ್ಟಿತ್ತು. ಅಲ್ಲದೆ ವಿದ್ಯಾರ್ಥಿಗಳ ನಿರ್ದಿಷ್ಟ ಸಮಸ್ಯೆಗಳು ಮತ್ತು ಅವುಗಳ ಪರಿಹಾರಕ್ಕಾಗಿ ಈ ಸಂಘಟನೆಗಳು ತಮ್ಮ ಕಾರ್ಯ ಚಟುವಟಿಕೆಳನ್ನು ಸಿಮೀತಗೊಳಿಸಿದವು"[17] ಎಂದು ಅಭಿಪ್ರಾಯ ಪಡುತ್ತಾರೆ.

1950ರಲ್ಲಿ ಕಾಂಗ್ರೆಸ್ ನಾಯಕತ್ವವು ವಿದ್ಯಾರ್ಥಿಗಳು ಪಕ್ಷ ರಾಜಕೀಯದಿಂದ ದೂರ ಉಳಿಯಬೇಕು ಮತ್ತು ರಾಷ್ಟ್ರ ನಿರ್ಮಾಣ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕೆಂದು ಹೇಳಲು ಪ್ರಾರಂಭಿಸಿದರು. ಪಂಡಿತ ಜವಾಹರಲಾಲ ನೆಹರು ಅವರು "ವಿದ್ಯಾರ್ಥಿಗಳು ರಾಜಕೀಯ ಅಧ್ಯಯನ ಮಾಡಬೇಕು, ದೇಶದಲ್ಲಿ ಸಂಭವಿಸುತ್ತಿರುವ ರಾಜಕೀಯ ವಿದ್ಯಮಾನಗಳ ಅರಿವು ಇರಬೇಕು ಆದರೆ ಅವರು ಅನವಶ್ಯಕವಾಗಿ ರಾಜಕೀಯದಲ್ಲಿ ಭಾಗವಹಿಸಬಾರದು. ಅವರು ತಮ್ಮ ಹೆಚ್ಚಿನ ಸಮಯವನ್ನು ಓದಿನಲ್ಲಿ ತೊಡಗಿಸಿಕೊಳ್ಳಬೇಕು"[18] ಎಂದು ಹೇಳಿದರು. ಸ್ವಾತಂತ್ರ್ಯ ಪೂರ್ವದಲ್ಲಿ ವಿದ್ಯಾರ್ಥಿಗಳು ರಾಷ್ಟ್ರೀಯ ಚಳುವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಬೇಕೆಂದು ಹೇಳಿದ ನೆಹರು ಸ್ವಾತಂತ್ರ್ಯ ನಂತರ ತಮ್ಮ ನಿಲುವು ಬದಲಾಯಿಸಿದ್ದು ಹಲವು ಅನುಮಾನಗಳಿಗೆ ಅವಕಾಶ ಮಾಡಿಕೊಡುತ್ತದೆ.

ಸ್ವಾತಂತ್ರ್ಯ ನಂತರ ವಿದ್ಯಾರ್ಥಿ ಪ್ರತಿಭಟನಾ ಚಳುವಳಿಯು ಅರಾಜಕೀಯಕರಣ ಮತ್ತು ಪ್ರತ್ಯೇಕಿಕರಣಗೊಳಿಸಲಾಯಿತೆಂದು ಅಲ್ತಬಷ್ ಅಭಿಪ್ರಾಯ ಪಟ್ಟಿದ್ದಾರೆ. ಈ ಪ್ರವೃತಿಗೆ ಹಲವಾರು ಕಾರಣಗಳನ್ನು ಅವರು ಗುರುತಿಸಿದ್ದಾರೆ. ಮೊದಲನೆಯದಾಗಿ ವಿದ್ಯಾರ್ಥಿ ಸಮುದಾಯದಲ್ಲಿ ಹೆಚ್ಚುತ್ತಿರುವ ವೈವಿಧ್ಯತೆ. ಈ ಕಾರಣದಿಂದಾಗಿ ಇಂದು ವಿದ್ಯಾರ್ಥಿಗಳಲ್ಲಿ ಏಕತೆ ಇಲ್ಲದಂತಾಗಿದೆ. ಎರಡನೆಯದಾಗಿ ಉದಾತ್ತ ಕಾರಣಗಳಿಗಾಗಿ ಸ್ವಾರ್ಥತ್ಯಾಗ ಮತ್ತು ಬದ್ಧತೆಯ ಉತ್ಸಾಹ ಸ್ವಾತಂತ್ರ್ಯ ನಂತರ ಕಣ್ಮರೆಯಾಗಿರುವುದು ಮತ್ತು ಇಂದು ರಾಜಕೀಯ ನಾಯಕರು ರಾಷ್ಟ್ರಪುನರ್‌ನಿರ್ಮಾಣಕ್ಕಿಂತ ಹೆಚ್ಚಾಗಿ ರಾಜಕೀಯದಲ್ಲಿ ತಮ್ಮ ಸ್ಥಾನ ಭದ್ರಪಡಿಸಿಕೊಳ್ಳುವ ನಿರೀಕ್ಷಣೆಯಲ್ಲಿರುವುದು. ಮೂರನೆಯದಾಗಿ ರಾಷ್ಟ್ರದ ರಾಜಕೀಯ ಸಂಸ್ಥೆಗಳಲ್ಲಿ ಹೆಚ್ಚುತ್ತಿರುವ ಸ್ಥಿರತೆಯು ವಿದ್ಯಾರ್ಥಿ ರಾಜಕೀಯವು ರಾಷ್ಟ್ರ ರಾಜಕೀಯದ ಮೇಲೆ ಪ್ರಭಾವ ಬೀರುವುದನ್ನು ಕಡಿಮೆಮಾಡಿತ್ತು. ನಾಲ್ಕನೆಯದಾಗಿ ಸ್ವಾತಂತ್ರ್ಯ ಪೂರ್ವ ವಿಶ್ವವಿದ್ಯಾಲಯಗಳು ಕಲಾ ಮತ್ತು ಸಮಾಜ ವಿಜ್ಞಾನಗಳಿಗೆ ಹೆಚ್ಚಿನ ಆದ್ಯತೆ ನೀಡಿದವು. ಈ ವಿಭಾಗದ ವಿದ್ಯಾರ್ಥಿಗಳು ಬೌದ್ದಿಕ ಚಟುವಟಿಕೆಗಳಿಗೆ ಮತ್ತು ರಾಜಕೀಯ ವಿದ್ಯಮಾನಗಳಿಗೆ ಹೆಚ್ಚಿನ ಮಹತ್ವ ನೀಡುತ್ತಿದ್ದರು. ವೈಚಾರಿಕ ಪ್ರತಿಭಟನೆಯಲ್ಲಿ ಅವರು ಪಾಲ್ಗೋಳ್ಳುತ್ತಿದ್ದರು. ಆದರೆ ಸ್ವಾತಂತ್ರ್ಯ ನಂತರ ಪೃತ್ತಿಪರ ಕೋರ್ಸಗಳಿಗೆ ಹೆಚ್ಚಿನ ಆದ್ಯತೆ ನೀಡಿದ್ದರಿಂದ ಈ ವಿಭಾಗದ ವಿದ್ಯಾರ್ಥಿಗಳು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವುದು ತೀರಾ ಕಡಿಮೆ ಹೀಗಾಗಿ ಸ್ವಾತಂತ್ರ್ಯ ನಂತರ ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸುವುದು ಕಡಿಮೆಯಾಯಿತು[19] ಎಂದು ಅವರು ಹೇಳಿದ್ದಾರೆ.

ಓಂ ದತ್ತ ತ್ರಿಪಾಠಿ ಅವರು ತಮ್ಮ "ಎ ಸರ್ವೆ ಆಫ್ ಸ್ಟುಡೆಂಟ್ ಎಕ್ಟಿವಿಜಮ್ ಇನ್ ಉನಿವರ್ಸಿಟಿ" ಎಂಬ ಸಂಶೋಧನಾ ಪ್ರಬಂಧದಲ್ಲಿ ದೇಶ ಸ್ವಾತಂತ್ರ್ಯ ಗಳಿಸಿದ ನಂತರ ಕೇಂದ್ರಾಭಿಗಾಮಿ ಶಕ್ತಿಗಳಾದ ದೇಶಭಕ್ತಿ ಮತ್ತು ರಾಷ್ಟ್ರೀಯತೆ ತಮ್ಮ ಮಹತ್ವ ಕಳೆದುಕೊಳ್ಳಲು ಪ್ರಾರಂಭಿಸಿದವು. ಇವುಗಳ ಸ್ಥಾನದಲ್ಲಿ ಕೇಂದ್ರಾಪಗಾಮಿ ಶಕ್ತಿಗಳಾದ ಪ್ರಾದೇಶಿಕತೆ, ಕೋಮುವಾದ, ಪ್ರಾಂತೀಯತೆ, ವೃತ್ತಿಪರತೆ ಮುಂತಾದವುಗಳು ಸಮಾಜದ ಮೇಲೆ ಪ್ರಭಾವ ಬೀರಲು ಪ್ರಾರಂಭಿಸಿದವು. ವಿದ್ಯಾರ್ಥಿಗಳು ಸಮಾಜದ ಭಾಗವಾಗಿದ್ದರಿಂದ ಅವರೂ ಕೂಡ ಈ ಶಕ್ತಿಗಳ ಪ್ರಭಾವಕ್ಕೆ ಒಳಗಾಗಬೇಕಾಯಿತು[20] ಎಂದು ಹೇಳಿದ್ದಾರೆ

ಸ್ವಾತಂತ್ರ್ಯ ನಂತರ, ಯಾವುದೇ ರಾಷ್ಟ್ರವ್ಯಾಪಿ ಚಳುವಳಿಗಳು ವಿದ್ಯಾರ್ಥಿ ಸಮುದಾಯದಿಂದ ಆಗಲಿಲ್ಲ. ದೇಶದಲ್ಲಿ ಎಲ್ಲಾ ವಿದ್ಯಾರ್ಥಿ ಸಂಘಟನೆಗಳು ಒಗ್ಗೂಡಿ ರಾಷ್ಟ್ರವ್ಯಾಪಿ ಚಳುವಳಿಯನ್ನು ನಡೆಸದೆ ಇರುವುದು ನಾವು ಗಮನಿಸಬೇಕಾದ ವಿಷಯ. ಇದಕ್ಕೆ

ಮೂಲಕಾರಣ ವಿದ್ಯಾರ್ಥಿ ಸಮೂಹಗಳು ರಾಜಕೀಯ ಆಧಾರದ ಮೇಲೆ ವಿಭಜನೆಗೊಂಡವು. ಆದರೆ ಬೇರೆ ಬೇರೆ ರಾಜ್ಯಗಳಲ್ಲಿ ವಿದ್ಯಾರ್ಥಿ ಸಮೂಹಗಳು ಹಲವಾರು ಬೇಡಿಕೆಗಳ ಈಡೇರಿಕೆಗಾಗಿ ಹೋರಾಟ ಮಾಡಿದ್ದನ್ನು ನಾವು ನೋಡಬಹುದು ಅಷ್ಟೇ ಅಲ್ಲದೆ ಕೆಲವು ರಾಜ್ಯಗಳಲ್ಲಿ ವಿದ್ಯಾರ್ಥಿ ಪ್ರತಿಭಟನೆಯೂ ತೀವ್ರ ಸ್ವರೂಪ ಪಡೆದುಕೊಂಡು ಸರ್ಕಾರಗಳ ಬದಲಾವಣೆಗೂ ಕಾರಣಿಕರ್ತವಾದವು. ವಿದ್ಯಾರ್ಥಿ ಚಳುವಳಿಯನ್ನು ಬೆಳೆಸಿ ಪೋಷಿಸಿಕೊಂಡುಬಂದ ಮೊದಲ ರಾಜ್ಯವೆಂದರೆ ಪಶ್ಚಿಮ ಬಂಗಾಳ. ವಿದ್ಯಾರ್ಥಿ ಕ್ರೀಯಾಶೀಲತೆಗೆ ಪಶ್ಚಿಮ ಬಂಗಾಳದ ರಾಜಧಾನಿಯಾದ ಕಲ್ಕತ್ತಾ ಕೇಂದ್ರ ಸ್ಥಳವಾಯಿತು. ವಿದ್ಯಾರ್ಥಿಗಳು ರಾಜ್ಯದ ಜನಪರ ಚಳುವಳಿಗಳಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರು. ಟ್ರಾಮ್‌ಫೇರ್ ಸ್ಟ್ರೈಕ್, ಬಂಗಾಲ–ಬಿಹಾರ ವಿಲಿನಗೊಳಿಸುವುದು, ಬೆಲೆ ಏರಿಕೆ, ಶಿಕ್ಷಕರ ಸಂಬಳ ಹೆಚ್ಚಳ ಮುಂತಾದ ಪ್ರತಿಭಟನೆಗಳಲ್ಲಿ ವಿದ್ಯಾರ್ಥಿಗಳು[21] ನಿರ್ಣಾಯಕ ಪಾತ್ರ ವಹಿಸಿದರು.

1967ರಲ್ಲಿ ವಿದ್ಯಾರ್ಥಿಗಳು ನೇರವಾಗಿ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದ್ದಲ್ಲದೆ ಮೊಟ್ಟಮೊದಲಬಾರಿಗೆ ಪಶ್ಚಿಮ ಬಂಗಾಳದಲ್ಲಿ ಕಾಂಗ್ರೇಸ್ಸೆತರ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬರುವಂತೆ ಮಾಡಿದರು. 1967 ಮತ್ತು 1970ರ ಅವಧಿಯಲ್ಲಿ ಪ್ರಸಿಡೆನ್ಸಿ ಕಾಲೇಜು ಮತ್ತು ಹಿಂದೂ ಹಾಸ್ಟೆಲ್ ಸಕ್ಸಲೈಟ್ ಚಟುವಟಿಕೆಗಳ ಸಕ್ರೀಯ ತಾಣಗಳಾಗಿದ್ದವು. ಅಷ್ಟೇ ಅಲ್ಲದೆ ಈ ಮಹಾ ವಿದ್ಯಾಲಯ ಒಳ್ಳೆಯ ಮಾವೊಯಿಸ್ಟ್ ನಾಯಕರನ್ನು ಹುಟ್ಟುಹಾಕಿತು.[22] ಚಾರು ಮುಜುಮ್‌ದಾರ್ ಅವರ ನಾಯಕತ್ವದಲ್ಲಿ ಪಶ್ಚಿಮ ಬಂಗಾಳದ ಕೆಲವು ಭಾಗಗಳಲ್ಲಿ ವಿದ್ಯಾರ್ಥಿಗಳು ಗೆರಿಲ್ಲಾ ಯುದ್ಧ ಮತ್ತು ಭಯೋತ್ಪಾದನಾ ತಂತ್ರಗಳನ್ನು ಬಳಸಿಕೊಂಡರು. ಆದರೆ ಸರಕಾರದ ಕಠಿಣ ಧೋರಣೆಯಿಂದಾಗಿ ಚಳುವಳಿ ನೀರಿಕ್ಷಿತ ಯಶಸ್ಸು ಕಾಣಲಿಲ್ಲ. ಪ್ರತಿಭಾವಂತ ಯುವಕ ಮತ್ತು ಯುವತಿಯರ ಬಲಿದಾನ ಭಾರತದಲ್ಲಿ ಜನತಾ ಪ್ರಜಾಸತ್ತಾತ್ಮಕ ಕ್ರಾಂತಿಗೆ ಒಂದು ಉದಾಹರಣೆಯಾಯಿತು.

ಉತ್ತರ ಪ್ರದೇಶ ಕೂಡ ವಿದ್ಯಾರ್ಥಿ ರಾಜಕೀಯ, ಅದರಲ್ಲಿಯೂ ಶೈಕ್ಷಣಿಕ ಬಿಕ್ಕಟ್ಟಿನಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯ ಪ್ರಭಾವಕ್ಕೆ ಒಳಗಾಗಬೇಕಾಯಿತು. ಬನಾರಸ, ಅಲಹಬಾದ ಮತ್ತು ಅಲಿಘರ ವಿಶ್ವವಿದ್ಯಾಲಯಗಳು ಮೇಲಿಂದ ಮೇಲೆ ವಿದ್ಯಾರ್ಥಿಗಳ ಪ್ರತಿಭಟನೆಯನ್ನು ಎದುರಿಸಬೇಕಾಯಿತು. ಪ್ರಾದೇಶಿಕತೆ ಮತ್ತು ರಾಜಕೀಯಕರಣವು 1958, 1965 ಮತ್ತು 1968ರಲ್ಲಿ ಬನಾರಸ ವಿಶ್ವವಿದ್ಯಾಲಯದಲ್ಲಿ ನಡೆದ ವಿದ್ಯಾರ್ಥಿ ಪ್ರತಿಭಟನೆಗೆ ಮೂಲಕಾರಣಗಳಾದವು. ಜೋಸೆಫ್ ಡಿ ಬೋನಾ ತಮ್ಮ ಅಲಹಬಾದ ವಿಶ್ವವಿದ್ಯಾಲಯದ ಅಧ್ಯಯನದಲ್ಲಿ, ಪ್ರಾಂತೀಯತೆ ಮತ್ತು ಕೆಳವರ್ಗದ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳವು ವಿದ್ಯಾರ್ಥಿಗಳ ಅಶಾಂತಿಗೆ ಪ್ರಮುಖ ಕಾರಣಗಳಾದವ[23] ಎಂದು ಅವರು ಗುರುತಿಸಿರುತ್ತಾರೆ.

ಬಿಹಾರದಲ್ಲಿ ರಾಜಕಾರಣೀಗಳು ಮತ್ತು ಶಿಕ್ಷಕ ರಾಜಕಾರಣಿಗಳು ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಗೊಳ್ಳುವುದಕ್ಕೊಸ್ಕರ ಶೈಕ್ಷಣಿಕ ಸಂಸ್ಥೆಗಳನ್ನು ರಾಜಕೀಯ ವೇದಿಕೆಗಳನ್ನಾಗಿ ಉಪಯೋಗಿಸಿಕೊಂಡರು. ವಿದ್ಯಾರ್ಥಿ ಸಮುದಾಯವನ್ನು ಹಲವು ಗುಂಪುಗಳಾಗಿ ವಿಂಗಡಿಸಿ, ಅವುಗಳ ಮಧ್ಯೆ ಭಿನ್ನಾಭಿಪ್ರಾಯ ಹುಟ್ಟು ಹಾಕಿ ಆಂತರಿಕ ಹೋರಾಟಕ್ಕೆ ದಾರಿ ಮಾಡಿಕೊಟ್ಟರು.[24] ವಿದ್ಯಾರ್ಥಿಗಳು ಚುನಾವಣಾ ರಾಜಕೀಯದಲ್ಲಿ ಭಾಗವಹಿಸುವುದರ ಮುಖಾಂತರ ಕಾಂಗ್ರೇಸ್ಸೆತರ ಪಕ್ಷಗಳಿಗೆ ಬೆಂಬಲ ನೀಡಿದರು.

1974ರ ಬಿಹಾರ ವಿದ್ಯಾರ್ಥಿ ಚಳುವಳಿಯು ಭಾರತದ ವಿದ್ಯಾರ್ಥಿ ರಾಜಕೀಯದ ಒಂದು ಮಹತ್ವದ ಘಟ್ಟ. ‘ಛಾತ್ರ ಸಂಘರ್ಷ ಸಮಿತಿಯು’ ಜಯಪ್ರಕಾಶ ನಾರಾಯಣರವರ ನಾಯಕತ್ವದಲ್ಲಿ ಮೊಟ್ಟಮೊದಲ ಬಾರಿಗೆ ವ್ಯಾಪಕ ಸಾಮಾಜಿಕ ಸಂಗತಿಗಳಾದ ಪ್ರಜಾಪ್ರಭುತ್ವ ಉಳಿಸಿ, ಚುನಾವಣಾ ಸುಧಾರಣೆ, ಸ್ವಜನ ಪಕ್ಷಪಾತ ಮತ್ತು ಭ್ರಷ್ಟಾಚಾರದ ನಿರ್ಮೂಲನೆ, ಅವಶ್ಯಕ ವಸ್ತುಗಳು ನ್ಯಾಯ ಬೆಲೆಗೆ ಸಿಗುವುದು ಮತ್ತು ಶಿಕ್ಷಣ ವ್ಯವಸ್ಥೆಯ ಪುನರ್ ರಚನೆ ಈ ವಿಷಯಗಳ ಮೇಲೆ ಹೆಚ್ಚು ಕೇಂದ್ರಿಕರಿಸಿತು.[25] ಸಾಮಾನ್ಯ ಜನತೆಯಿಂದ ಈ ಚಳುವಳಿಗೆ ಸಾಕಷ್ಟು ಬೆಂಬಲ ದೊರೆಯಿತು. ಆದರೆ 1974ರ ಚಳುವಳಿಯು ಸರಕಾರವನ್ನು ಅಧಿಕಾರದಿಂದ ತೆಗೆದುಹಾಕುವಲ್ಲಿ ಯಶಸ್ವಿಯಾಯಿತು. ಆದರೆ ಸಂಪೂರ್ಣ ಕ್ರಾಂತಿಯ ಕಲ್ಪನೆ ಇದ್ದಾಗಿಯೂ, ಅಸ್ತಿತ್ವದಲ್ಲಿದ್ದ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ಬದಲಾಯಿಸುವಲ್ಲಿ[27] ಈ ಚಳುವಳಿಯು ವಿಫಲವಾಯಿತು.

1974ರಲ್ಲಿ ಗುಜರಾತನಲ್ಲಿ ನಡೆದ ವಿದ್ಯಾರ್ಥಿ ಚಳುವಳಿಯು ವಿದ್ಯಾರ್ಥಿ ಕ್ರೀಯಾಶೀಲತೆಯ ಒಂದು ಮಹತ್ವದ ಹಂತ ಎಂದು ಹೇಳಬಹುದು. ಸಾಮಾಜಿಕ ಸಂಗತಿಗಳಾದ ಉನ್ನತ ಸ್ಥಾನಗಳಲ್ಲಿ ಮಿತಿಮೀರಿದ ಭ್ರಷ್ಟಾಚಾರ, ಬ್ಲ್ಯಾಕ್ ಮಾರ್ಕೆಟ್, ಬೆಲೆ ಏರಿಕೆ ಮತ್ತು ನಿರುದ್ಯೋಗದ ವಿರುದ್ಧ ವಿದ್ಯಾರ್ಥಿಗಳು ಬೀದಿಗಿಳಿದು ಪ್ರತಿಭಟಿಸಿದರು. ವಿದ್ಯಾರ್ಥಿ ಚಳುವಳಿಯ ಇತಿಹಾಸದಲ್ಲಿಯೇ ಇದು ವಿದ್ಯಾರ್ಥಿ ಶಕ್ತಿ ಏನೆಂಬುದಕ್ಕೆ ಸಾಕ್ಷಿಯಾಯಿತು. ಈ ಚಳುವಳಿಯು ಇಡೀ ಗುಜರಾತ ರಾಜ್ಯಾದ್ಯಂತ ಪಸರಿಸಿತ್ತಲ್ಲದೆ ಅಧಿಕಾರದಲ್ಲಿದ್ದ ಕಾಂಗ್ರೇಸ್ ಸರಕಾರವನ್ನು ಕೆಳಗಿಳಿಸಿತು. ಅಷ್ಟೇ ಅಲ್ಲದೆ ವಿಧಾನ ಸಭೆ ವಿಸರ್ಜಿಸುವಂತೆ ಪ್ರಧಾನ ಮಂತ್ರಿಯವರ ಮೇಲೆ ಒತ್ತಡ ಹೇರಿತು. ಸಮಾಜೋ–ಆರ್ಥಿಕ ವಿಷಯಗಳಿಗೆ[28] ಈ ಚಳುವಳಿಯು ಹೆಚ್ಚಿನ ಆಧ್ಯತೆ ನೀಡಿತು.

1973–74ರ ಗುಜರಾತ ಮತ್ತು ಬಿಹಾರದಲ್ಲಾದ ಚಳುವಳಿಗಳು ಇಂದಿರಾಗಾಂಧಿಯವರ ಆಡಳಿತವನ್ನು ಸಾಮಾನ್ಯ ಜನತೆ ವಿರೋಧಿಸುವಂತೆ ಮಾಡುವಲ್ಲಿ ಯಶಸ್ವಿಯಾದವು. ಆದರೆ ಸಾಮಾಜಿಕ– ರಾಜಕೀಯ ವ್ಯವಸ್ಥೆಯಲ್ಲಿ ಗಮನಾರ್ಹವಾದ ಬದಲಾವಣೆ ಮಾಡುವಲ್ಲಿ ವಿಫಲವಾದವು. ವಿದ್ವಾಂಸ ಥಕರನ್ ಪಿ.ಕೆ.ಮೈಕಲ್ ಹೇಳುವಂತೆ “ವಿದ್ಯಾರ್ಥಿಗಳು ಚಳುವಳಿಯನ್ನು ಹುಟ್ಟುಹಾಕಬಹುದು, ಮುನ್ನಡೆಸಬಹುದು ಎಂಬುವುದನ್ನು ಗುಜರಾತ ಮತ್ತು ಬಿಹಾರ ಚಳುವಳಿಗಳು ರುಜುವಾತುಪಡಿಸಿವೆ. ಆದರೆ ಇದರರ್ಥ ನಿಜವಾದ ಕ್ರಾಂತಿಕಾರಿ ಚಳುವಳಿಯನ್ನು ವಿದ್ಯಾರ್ಥಿಗಳು ಮುನ್ನಡೆಸಿಕೊಂಡು ಹೋಗುವ ಸಾಮರ್ಥ್ಯ ಇದೆ ಎಂದು ಅರ್ಥವಲ್ಲ. ಏಕೆಂದರೆ ಸಾಮಾಜಿಕ ಪ್ರಗತಿಯ ಶಕ್ತಿಗಳು ಉತ್ಪಾದನಾ ಸಂಬಂಧಿ ಮೇಲೆ ಅವಲಂಭನೆಯಾಗಿವೆ. ಆದಕಾರಣ ವಿದ್ಯಾರ್ಥಿಗಳು, ಕಾರ್ಮಿಕರಿಗೆ ಹಾಗೂ ರೈತರಿಗೆ ತಮ್ಮ ಬೆಂಬಲ ನೀಡಬಹುದೆ ಹೊರತು ತಾವೇ ಕ್ರಾಂತಿಕಾರಿ ಬದಲಾವಣೆ ಚಳುವಳಿಯ ನಾಯಕತ್ವದ ಜವಾಬ್ದಾರಿ ವಹಿಸುವ ಸಾಮರ್ಥ್ಯ ಹೊಂದಿಲ್ಲವೆಂದು[29] ಸ್ಪಷ್ಟ ಪಡಿಸಿದ್ದಾರೆ.

1950ರಲ್ಲಿ ಆಂಧ್ರ ಪ್ರತ್ಯೇಕ ರಾಜ್ಯ ಚಳುವಳಿಯಲ್ಲಿ ವಿದ್ಯಾರ್ಥಿಗಳು ಅತ್ಯಂತ ಮಹತ್ವದ ಪಾತ್ರ ವಹಿಸಿದರು. ರಾಜ್ಯದಲ್ಲಿ ನಡೆಯುತ್ತಿರುವ ನಕ್ಸಲೈಟ್ ಚಳುವಳಿಗೆ ಪ್ರಗತಿಪರ ವಿದ್ಯಾರ್ಥಿ ನಾಯಕರು ಸಹಾನುಭೂತಿಯುಳ್ಳವರಾಗಿದ್ದಾರೆ. ತೆಲಂಗಾಣ ಪ್ರತ್ಯೇಕ ರಾಜ್ಯ ಬೇಡಿಕೆಯ ಪ್ರತಿಭಟನೆಯಲ್ಲಿಯೂ ವಿದ್ಯಾರ್ಥಿಗಳು ಮುಂಚೂಣಿಯಲ್ಲಿರುವುದು ಗಮನಿಸ ಬೇಕಾದ ವಿಷಯ. ದಕ್ಷೀಣ ಭಾರತದಲ್ಲಿ ಜನತೆಯ ಮೇಲೆ ಹಿಂದಿ ರಾಷ್ಟ್ರ ಭಾಷೆಯನ್ನಾಗಿ ಒತ್ತಾಯಪೂರ್ವಕವಾಗಿ ಹೇರಿದಾಗ ವಿದ್ಯಾರ್ಥಿಗಳು ಅದರ ವಿರುದ್ಧದ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದರು. ಅದರಲ್ಲಿಯೂ ತಮಿಳುನಾಡಿನ ವಿದ್ಯಾರ್ಥಿಗಳು ಪ್ರತಿಭಟನೆಯ ಮೂಂಚೂಣಿಯಲ್ಲಿದ್ದು ವಿರೋಧಿಸಿದರು. ಇಂಗ್ಲೀಷ ಸಂಪರ್ಕ ಭಾಷೆಯನ್ನಾಗಿ ಮುಂದುವರೆಸಲು ಕೇಂದ್ರದ ಮೇಲೆ ಸಾಕಷ್ಟು ಒತ್ತಡ ಹೇರಿದರು. ಭಾಷಕಾರಣಕ್ಕಾಗಿಯೆ ತಮಿಳುನಾಡಿನಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರ ಕಳೆದುಕೊಂಡಿತು ಮತ್ತು ವಿದ್ಯಾರ್ಥಿಗಳ ಬೆಂಬಲದಿಂದಾಗಿ ಡಿ.ಎಮ್.ಕೆ. ಪಕ್ಷ ಅಧಿಕಾರಕ್ಕೆ ಬಂದದ್ದು ಇತಿಹಾಸ.

1950ರಲ್ಲಿ ಮಹಾರಾಷ್ಟ್ರದಲ್ಲಿ ವಿದ್ಯಾರ್ಥಿಗಳು ಮರಾಠಿ ಮಾತನಾಡುವ ಜನರಿಗೆ ಪ್ರತ್ಯೇಕ ರಾಜ್ಯ ಬೇಡಿಕೆಗಾಗಿ ಹೋರಾಟ ಪ್ರಾರಂಭಿಸಿದರು. 1960ರಲ್ಲಿತಮ್ಮ ಈ ಹೋರಾಟದಲ್ಲಿ ಯಶಸ್ವಿಯನ್ನು ಕಂಡರು. 1978ರಲ್ಲಿ ಮರಾಠಾವಾಡ ವಿಶ್ವವಿದ್ಯಾಲಯಕ್ಕೆ ಡಾ॥ ಬಿ.ಆರ್.ಅಂಬೇಡ್ಕರ್ ಹೆಸರಿಡುವಂತೆ ವಿದ್ಯಾರ್ಥಿಗಳು ದೊಡ್ಡ ಪ್ರಮಾಣದ ಆಂದೋಲನ ನಡೆಸಿದರು. ಈ ಸಂದರ್ಭದಲ್ಲಿ ಹರಿಜನ ವಿದ್ಯಾರ್ಥಿಗಳು ಹಾಗೂ ಜಾತಿ ಹಿಂದೂ ವಿದ್ಯಾರ್ಥಿಗಳ ನಡುವೆ ದೊಡ್ಡ ಸಂಘರ್ಷವೇ[30] ಉಂಟಾಯಿತು. 1977ರಲ್ಲಿ ಸೆಂಟ್ ಗ್ಜೇವಿಯರ್ ಕಾಲೇಜಿನ ವಿದ್ಯಾರ್ಥಿಗಳು ವಾಕ್ ಸ್ವಾತಂತ್ರ್ಯ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಪ್ರಾಚಾರ್ಯ ಮತ್ತು ಕಾಲೇಜಿನ ಆಡಳಿತ ಮಂಡಳಿ ಕಸಿದುಕೊಂಡಿದೆ ಎಂದು ಕಾಲೇಜಿನ ವಿರುದ್ಧ ಸಂಪು ಹೂಡಿದರು.

1978ರಲ್ಲಿ ಅಕ್ರಮ ವಿದೇಶಿಯರ ಒಳ ನುಸುಳುವಿಕೆಯ ಸಮಸ್ಯೆ ಆಸ್ಸಾಂನಲ್ಲಿ ಸಂಭೀರ ಸ್ವರೂಪ ಪಡೆದುಕೊಂಡಿತು. ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಹಾಗೂ ಭಾಷಿಕವಾಗಿ ಎಲ್ಲಿ ನಮ್ಮ ನಾಡಿನಲ್ಲೇ ನಾವು ಅಲ್ಪ ಸಂಖ್ಯಾತರಾಗುವ ಭೀತಿ ಅವರನ್ನು ಕಾಡಲಾರಂಭಿಸಿತು. ಇದರ ವಿರುದ್ಧ ವಿದ್ಯಾರ್ಥಿಗಳು ರಾಜ್ಯವ್ಯಾಪಿ ಪ್ರತಿಭಟನೆಗೆ ಮುಂದಾದರು. ಅದರಲ್ಲಿಯೂ 1979ರಲ್ಲಿ ಚುನಾವಣಾ ಆಯುಕ್ತರು ಮತದಾರರ ಪಟ್ಟಿ ಪರಿಷ್ಕರಣೆಗೆ ಆದೇಶ ಹೊರಡಿಸಿದಾಗ ಆಸ್ಸಾಂ ಅಕ್ಷರಶಃ ರಣಭೂಮಿಯಾಗಿ ಮಾರ್ಪಟ್ಟಿತ್ತು. ಆಲ್ ಆಸ್ಸಾಂ ಸ್ಟುಡೆಂಟ್ ಯುನಿಯನ್ಸ್, ಆಸ್ಸಾಂ ಗಣ ಸಂಗ್ರಾಮ್ ಪರಿಷತ್, ಕೆಲವು ಪ್ರಾದೇಶಿಕ ಪಕ್ಷಗಳು ಮತ್ತು ಸಾಂಸ್ಕೃತಿಕ ಸಂಘಟನೆಗಳು ಒಟ್ಟುಗೂಡಿ, ಅಕ್ರಮ ವಿದೇಶಿಯರ ಅಕ್ರಮ ವಿದೇಶಿಯರ ಒಳನುಸುಳುವಿಕೆ ಕುರಿತು ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸಲು ರಾಜ್ಯವ್ಯಾಪಿ ಆಂದೋಲನ ಪ್ರಾರಂಭಿಸಿದವು. ಈ ಚಳುವಳಿಯ ನಾಯಕರು ರಾಜ್ಯದಲ್ಲಿ ಅಕ್ರಮವಾಗಿ ವಾಸಿಸಿರುವ ವಿದೇಶಿಯರನ್ನು ಗುರುತಿಸಿ ಅವರ ಮತದಾನದ ಹಕ್ಕನ್ನುಕಸಿದುಕೊಳ್ಳಬೇಕೆಂದು ಕೇಂದ್ರ ಸರ್ಕಾರಕ್ಕೆ ತಮ್ಮ ಬೇಡಿಕೆಯನ್ನು ಸಲ್ಲಿಸಿದರು. 1979ನೇ ವರ್ಷವು ಸರ್ಕಾರದ ಅಸ್ಥಿರತೆ, ನಿರಂತರ ಪ್ರತಿಭಟನೆ ಮತ್ತು ಜನಾಂಗೀಯ ಹಿಂಸೆಗಳಿಗೆ ಸಾಕ್ಷಿಯಾಯಿತು. 1979ರಲ್ಲಿ ಪ್ರಾರಂಭವಾದ ವಿದ್ಯಾರ್ಥಿ ಚಳುವಳಿಯು 1985ರ ವರೆಗೆ ಕೇಂದ್ರ ಸರ್ಕಾರ ಆಸ್ಸಾಂ ಗಣ ಸಂಗ್ರಾಮ್ ಪರಿಷತ್‌ನೊಂದಿಗೆ ಒಪ್ಪಂದ ಮಾಡಿಕೊಳ್ಳುವವರೆಗೂ ಮುಂದುವರೆಯಿತು. ಮುಂದೆ ಆಸ್ಸಾಂ ವಿಧನಸಭೆಗೆ ಚುನಾವಣೆಗಳು ನಡೆದು ಅದರಲ್ಲಿ ಮೊಟ್ಟ ಮೊದಲಬಾರಿಗೆ ಆಸ್ಸಾಂ ಗಣ ಪರಿಷತ್ ಅಧಿಕಾರದ ಚುಕ್ಕಾಣಿ ಹಿಡಿಯಿತು. ಭರತದ ವಿದ್ಯಾರ್ಥಿ ರಾಜಕೀಯ ಇತಿಹಾಸದಲ್ಲಿಯೆ ಇದೊಂದು ಅತ್ಯಂತ ಅವಿಸ್ಮರಣೀಯವಾದ ಘಟನೆ[31] ಎಂದು ಅವರು ದಾಖಲಿಸಿದ್ದಾರೆ.

1975ರಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ಸರಕಾರ ದೇಶದ ಆರ್ಥಿಕ–ಸಮಾಜಿಕ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಿಫಲವಾದುದ್ದು, ಹಲವಾರು ಪ್ರತಿಭಟನೆಗಳಿಗೆ ಹಾಗೂ ಅತೃಪ್ತಿಗೆ ಅವಕಾಶ ಮಾಡಿಕೊಟ್ಟಿತು. ವಿದ್ಯಾರ್ಥಿ ಚಳುವಳಿಯು ಜಯಪ್ರಕಾಶ ನಾರಾಯಣರವರ ಮಾರ್ಗದರ್ಶನದಲ್ಲಿ ಬಿಹಾರ ಮತ್ತು ಗುಜರಾತನಲ್ಲಿ ಕಾಂಗ್ರೇಸ್ ಸರಕಾರವನ್ನು ಅಧಿಕಾರದಿಂದ ತೆಗೆದು ಹಾಕುವಲ್ಲಿ ಯಶಸ್ವಿಯಾಯಿತು. ಪರಿಸ್ಥಿಯ ಗಂಭೀರತೆಯನ್ನು ಅರಿತ ಶ್ರೀಮತಿ ಇಂದಿರಾಗಾಂಧಿ 1975ರಲ್ಲಿ ದೇಶದಲ್ಲಿ ಆಂತರಿಕ ತುರ್ತು ಪರಿಸ್ಥಿತಿ ಘೋಷಿಸಿದರು. ಚಳುವಳಿಯ ಮೂಂಚೂಣಿಯಲ್ಲಿದ್ದ ವಿದ್ಯಾರ್ಥಿಗಳು ಕಾಂಗ್ರೇಸ್ ನಾಯಕರ ಕೆಂಗಣ್ಣಿಗೆ ಗುರಿಯಾಗಬೇಕಾಯಿತು. ವಿದ್ಯಾರ್ಥಿ ಸಂಘಗಳನ್ನು ಅರಾಜಕೀಯಕರಣ ಗೊಳಿಸಲಾಯಿತು. ವಿದ್ಯಾರ್ಥಿ ಸಂಘಗಳಿಗೆ ಚುನಾವಣೆಗಳನ್ನು ನಿಷೇಧಿಸಲಾಯಿತು. ಸೆಮಿಸ್ಟರ್ ಪದ್ಧತಿ ಜಾರಿಗೊಳಿಸಿ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗವಹಿಸದಂತೆ ತಡೆಯಲಾಯಿತು. ಎಸ್.ಎಫ್.ಆಯ್. ಮತ್ತು ಎ.ಬಿ.ವಿ.ಪಿ. ಸಂಘಟನೆಯ ವಿದ್ಯಾರ್ಥಿಗಳು ಭೂಗತರಾಗಬೇಕಾಯಿತು ಇಲ್ಲವೆ ಬಂಧನಕ್ಕೊಳಗಾಗಬೇಕಾಯಿತು. ಇಷ್ಟೆಲ್ಲಾ ನಿರ್ಬಂಧನೆಗಳು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಹಾಕಿದ್ದಾಗಿಯೂ ಕೂಡ, ವಿದ್ಯಾರ್ಥಿ ಚಳುವಳಿಯು ಅಳಿಯದೇ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿತ್ತು. ನಿಜವಾಗಿಯೂ 1975–77ರಲ್ಲಿ ತುರ್ತು ಪರಿಸ್ಥಿತಿಯ ವಿರುದ್ಧದ ಹೋರಾಟಕ್ಕೆ ವಿದ್ಯಾರ್ಥಿಗಳು ಮೌಲ್ಯಯುತವಾದ ಕೊಡುಗೆ ನೀಡಿದ್ದಾರೆ ಎಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು. ತುರ್ತು ಪರಿಸ್ಥಿತಿಯ ಸಮಯದಲ್ಲಿ ವಿದ್ಯಾರ್ಥಿಗಳ ಮೇಲಾದ ಅಹಿತಕರ ಘಟನೆಗಳು ಅವರ ಅಶಾಂತಿಗೆ ಕಾರಣವಾಯಿತು. ಮುಂದೆ 1977ರ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೇಸ್ ಪಕ್ಷವನ್ನು ಸೋಲಿಸುವಲ್ಲಿ ವಿದ್ಯಾರ್ಥಿಗಳು ನಿರ್ಣಾಯಕ ಪಾತ್ರ ವಹಿಸಿದರು. ಮೊಟ್ಟಮೊದಲಬಾರಿಗೆ ಕೇಂದ್ರದಲ್ಲಿ ಕಾಂಗ್ರೇಸ್ಸೇತರ ಸರಕಾರ ಅಧಿಕಾರಕ್ಕೆ ಬರುವಲ್ಲಿ ವಿದ್ಯಾರ್ಥಿಗಳ ಪಾತ್ರವನ್ನು ಯಾರೂ ನಿರ್ಲಕ್ಷಿಸುವಂತಿಲ್ಲ.

1990ರಲ್ಲಿ ವಿಧ್ಯಾರ್ಥಿ ಪ್ರತಿಭಟನೆಯು ಹಿಂಸಾತ್ಮಕ ಸ್ವರೂಪ ಪಡೆದುಕೊಂಡಿತು. ಏಕೆಂದರೆ ಮೀಸಲಾತಿ ವಿಷಯಕ್ಕೆ ಸಂಬಂಧಿಸಿದಂತೆ ಮಂಡಲ ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತರಲು ವಿ.ಪಿ.ಸಿಂಗ ಸರಕಾರ ನಿರ್ಧರಿಸಿತ್ತು. ಉತ್ತರ ಪ್ರದೇಶ, ಓರಿಸ್ಸಾ, ಚಂಡಿಘಡ ಮತ್ತು ದೆಹಲಿ ವಿಧ್ಯಾರ್ಥಿಗಳು ಮಂಡಲ್ ವಿರೊಧಿ ಚಳುವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಿದರು.ಅಷ್ಟೆ ಅಲ್ಲದೆ, ಕೆಲವು ವಿಧ್ಯಾರ್ಥಿಗಳು ಆತ್ಮಾಹುತಿಗೂ ಪ್ರಯತ್ನಿಸಿದರು. ಈ ವಿಷಯ ಸಂಸತ್ತಿನಲ್ಲಿ ಚರ್ಚೆಗೂ ಅವಕಾಶಮಾಡಿಕೊಟ್ಟಿತ್ತು. ಆದರೆ ಈ ಚಳುವಳಿ ಕೆಲವು ಕಾರಣಗಳಿಂದಾಗಿ ಇಡಿ ದೇಶದ ಗಮನ ಸೆಳೆಯಲಿಲ್ಲ. ಮೊದಲನೆಯದಾಗಿ, ನಗರದಲ್ಲಿರುವ ಮೇಲ್ಜಾತಿ ವಿಧ್ಯಾರ್ಥಿಗಳಿಗೆ ಮಾತ್ರ ಇದು ಸಿಮೀತವಾಯಿತು. ಎರಡನೆಯದಾಗಿ, ವಿಧ್ಯಾರ್ಥಿ ಸಮುದಾಯವು ಸೆಕ್ಟೆರಿಅನ್ ಆಧಾರದ ಮೇಲೆ ವಿಭಜಿಸಿತು. ಮುರನೆಯದಾಗಿ, ಮೀಸಲಾತಿ ಸೂಕ್ಷ್ಮವಿಷಯವಾದ್ದರಿಂದ ವಿಧ್ಯಾರ್ಥಿ ಸಂಘಟನೆಗಳಾಗಲಿ ಅಥವಾ ರಾಜಕೀಯ ಪಕ್ಷಗಳಾಗಲಿ ಬಹಿರಂಗವಾಗಿ ಚಳುವಳಿಗೆ ಬೆಂಬಲ ನೀಡಲಿಲ್ಲ. ಆದರೆ ಈ ಚಳುವಳಿಯ ದೊಡ್ಡ ಕೊಡುಗೆಯೆಂದರೆ ಮೀಸಲಾತಿ ಪರ–ವಿರೋಧಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿತ್ತು.

ಎಂ.ಚಂದ್ರ ಪೂಜಾರಿಯವರು ತಮ್ಮ ರಾಜಕೀಯ ಬಡತನ ಎಂಬ ಗ್ರಂಥದಲ್ಲಿ ಮೀಸಲಾತಿ ವಿಷಯವನ್ನು ಗಂಭೀರವಾಗಿ ಚರ್ಚಿಸಿದ್ದಾರೆ. ಅವರ ಪ್ರಕಾರ ''ಮೀಸಲಾತಿ ಮತ್ತು ದಕ್ಷತೆಯ ಅಥವಾ ಮೀಸಲಾತಿ ಮತ್ತು ಮೆರಿಟ್ ಸಂಬಂಧ – ಜಾತಿ ಆಧಾರದಲ್ಲಿ ಮೀಸಲಾತಿ ನೀಡುವುದರಿಂದ ನಮಗೆ ಯೋಗ್ಯ ಅಭ್ಯರ್ಥಿಗಳು ಸಿಗುವದಿಲ್ಲ ಎನ್ನುವ ವಾದದ ಹಿಂದೆ ಒಂದು ಗ್ರಹಿತ ಇದೆ. ಇದೇ ಸಂದರ್ಭದಲ್ಲಿ ಮೀಸಲಾತಿ ಒಂದು ಸಾಮಾಜಿಕ ಪರಿವರ್ತನೆಯ ಸಾಧನವೆಂದು[32] ಕೂಡ ಅವರು ವಾದಿಸಿದ್ದಾರೆ.

ಬಿ.ವಿ.ವೀರಭದ್ರಪ್ಪ ''ದಕ್ಷತೆಯ ಮಾನದಂಡವನ್ನು ಮುಂದಿಟ್ಟುಕೊಂಡು ವಾದ ಮಾಡುವ ಪ್ರತಿಭಾವಂತ ಮಿತ್ರರಿಗೆ ಒಂದು ಪ್ರಶ್ನೆ. ನಮ್ಮ ದೇಶ ನಾಲ್ಕೈದು ಸಾವಿರ ವರ್ಷಗಳ ಇತಿಹಾಸದಲ್ಲಿ ಎಲ್ಲ ಉನ್ನತ ಸ್ಥಾನಗಳೂ ಪ್ರತಿಭಾವಂತರಿಗೇ ಮೀಸಲಾಗಿದ್ದುದಲ್ಲಾ, ಆದರೂ ಈ ದೇಶ ಏಕೆ ಮೌಢ್ಯ, ಅಜ್ಞಾನ, ಮತ್ತು ಬಡತನಗಳಿಗೆ ತುತ್ತಾಯಿತು? ಏಕೆ ಈ ಧೇಶದ ಜನರಲ್ಲಿ ದೇಶಾಭಿಮಾನ, ಒಗ್ಗಟ್ಟುಗಳಿಲ್ಲದೆ, ಮೇಲಿಂದ ಮೇಲೆ ಪರಕೀಯರ ದಾಳಿಗೆ ತುತ್ತಾಗಬೇಕಾಯಿತು?[33]ಎಂದು ಪ್ರಶ್ನಿಸಿದ್ದಾರೆ. ಅಸ್ಗರ್ ಅಲಿ ಎಂಜಿನೀಯರ್ ಮೀಸಲಾತಿ ಆರ್ಥಿಕ ಕಾರಣಗಳಿಗಿಂತಲೂ ಹೆಚ್ಚಾಗಿ ಸಾಮಾಜಿಕ ಕಾರಣಗಳಿಗಾಗಿ ಅವಶ್ಯಕತೆ ಇದೆ[34] ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಈ ಮೇಲಿನ ಸಾಹಿತ್ಯ ಪರಾಮರ್ಶೆಯಿಂದ ಕಂಡುಬರುವ ಪ್ರಮುಖ ಫಲಿತಗಳೆಂದರೆ,

1. ಕರ್ನಾಟಕದ ವಿದ್ಯಾರ್ಥಿ ಕೀಯಾಶಿಲತೆಯು ಭಾರತದ ಸ್ವಾತಂತ್ರ್ಯ ಹೋರಾಟದಿಂದ ಜನ್ಮತಾಳಿದೆ.

2. ಕರ್ನಾಟಕದ ವಿದ್ಯಾರ್ಥಿ ಕ್ರೀಯಶೀಲತೆಯು ಸ್ವತಂತ್ರ ವಿದ್ಯಮಾನವಾಗಿರದೆ, ಬಾಹ್ಯ ಶಕ್ತಿಗಳ ನಿಯಂತ್ರಣಕ್ಕೆ ಒಳಪಟ್ಟಿದೆ.
3. ರಾಜ್ಯದ ವಿದ್ಯಾರ್ಥಿ ಕ್ರೀಯಾಶಿಲತೆಯು ವಿಶಾಲವಾದ ಸಾಮಾಜಿಕ ದೃಷ್ಟಿಕೋನದ ಕೊರತೆ ಕಂಡುಬರುತ್ತದೆ.
4. ರಾಜ್ಯದ ವಿದ್ಯಾರ್ಥಿ ಸಮುದಾಯ ಸಾಮಾಜೀಕರಣದ ಪ್ರಕಿಯೆ ಮುಖಾಂತರ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅಂತರ್ಗತ ಮಾಡಿಕೊಳ್ಳುತ್ತಿದೆ.
5. ವೈಚಾರಿಕ ರಾಜಕೀಯದಿಂದ ಕರ್ನಾಟಕದ ವಿದ್ಯಾರ್ಥಿ ಕ್ರಿಯಾಶೀಲತೆ ತನ್ನ ಸಂಬಂಧವನ್ನು ಕಳಚಿಕೊಂಡತೆ ಕಾಣುತ್ತದೆ.
6. ವಿದ್ಯಾರ್ಥಿ ಸಮುದಾಯಕ್ಕೆ ಸ್ಪಷ್ಟ ಮಾರ್ಗದರ್ಶನ ಮತ್ತು ಗುರಿನಿರ್ದೇಶನ ಇಲ್ಲದಿರುವುದು ದೊಡ್ಡ ಕೊರತೆಯಾಗಿದೆ.

**ಪರಾಮರ್ಶನ ಗ್ರಂಥಗಳು.**


1. ಎಸ್.ಎಮ್.ಲಿಪಸೆಟ್ (ಸಂ) "ಸ್ಟುಡೆಂಟ್ ಪೊಲಿಟಿಕ್ಸ್" ನ್ಯೂಯಾರ್ಕ ಬೇಸಿಕ್ ಬುಕ್ಸ್, 1967
2. ಲಿಬ್‌ಮ್ಯಾನ್ ವಾಕರ್ ಆಂಡ್ ಗ್ಲೇಜರ್, "ಲ್ಯಾಟಿನ್ ಅಮೇರಿಕನ್ ಯುನಿವರ್ಸಿಟಿ ಸ್ಟುಡೆಂಟ್ಸ್: ಎ ಸಿಕ್ಸ್ ನೆಷನ್ಸ್ ಸ್ಟಡಿ" ಕ್ಯಾಂಬ್ರಿಜ್, ಮೆಸ್ಸಾಚುಸೆಟ್ಸ್, ಹಾವರ್ಡ ಯುನಿವರ್ಸಿಟಿ ಪ್ರೆಸ್, 1972.
3. ಎಸ್.ಎಮ್.ಲಿಪಸೆಟ್ ಆಂಡ್ ಫಿಲಿಫ್ ಜಿ.ಅಲ್ತಬಷ್, "ಸ್ಟುಡೆಂಟ್ ಇನ್ ರಿವ್ಹೋಲ್ಟ್, ಇಂಟ್ರಾಡಕ್ಸನ್" ಬೇಕನ್ ಪ್ರೆಸ್, ಬೋಸ್ಟನ್, 1969.
4. ಆಯನ್ ರ್‍ಯಾಂಡ್ "ದಿ ನ್ಯೂ ಲೆಫ್ಟ್ : ದ ಎಂಟಿ ಇಂಡಸ್ಟ್ರಿಯಲ್ ರೆವೂಲ್ಯೂಷನ್" ದ ನ್ಯೂ ಅಮೇರಿಕನ್ ಲೈಬ್ರರಿ, ನ್ಯೂಯಾರ್ಕ 1971.
5. ಎ.ಬೆಲ್ಡನ್ ಫಿಲ್ಡ್ಸ್, "ದ ರೆವೂಲ್ಯೂಷನ್ ಬೆಟ್ರಾಯಿಡ್ : ದ ಫ್ರೆಂಚ್ ಸ್ಟುಡೆಂಟ್ ರಿವ್ಹೋಲ್ಟ್ ಆಫ್ ಮೇ–ಜೂನ್ 1968" ಇನ್ ಎಸ್.ಎಮ್.ಲಿಪಸೆಟ್ ಆಂಡ್ ಫಿಲಿಫ್ ಜಿ.ಅಲ್ತಬಷ್.
6. ಎ.ಬೆಲ್ಡನ್ ಫಿಲ್ಡ್ಸ್, "ದ ರೆವೂಲ್ಯೂಷನ್ ಬೆಟ್ರಾಯಿಡ್ : ದ ಫ್ರೆಂಚ್ ಸ್ಟುಡೆಂಟ್ ರಿವ್ಹೋಲ್ಟ್ ಆಫ್ ಮೇ–ಜೂನ್ 1968" ಇನ್ ಎಸ್.ಎಮ್.ಲಿಪಸೆಟ್ ಆಂಡ್ ಫಿಲಿಫ್ ಜಿ.ಅಲ್ತಬಷ್.
7. ಆರ್.ಆರ್.ಶರ್ಮಾ, "ಕ್ಯಾಂಪಸೆಸ್ ಆಫ್ ಹೈಯರ್ ಎಜುಕೇಶನ್ : ಜಿನಿಸಿಸ್ ಆಫ್ ಅನರೆಸ್ಟ್" ಜರ್ನಲ್ ಆಫ್ ಹೈಯರ್ ಎಜುಕೇಶನ್, ಯುಜಿಸಿ, ವ್ಯಾಲ್ಯೂಮ್ 11, ನಂ1&2, ನ್ಯೂ ದೆಹಲಿ.
8. ಜ್ವಾಯಿಸ್ ಗೆಲ್ಬ್ ಆಂಡ್ ಮ್ಯಾರಿಯನ್ ಲಿಫ್‌ಪ್ಯಾಲಿ, "ದ ಪೊಲಿಟಿಕ್ಸ ಆಫ್ ಸೋಷಿಯಲ್ ಚೇಂಜ್ : ಎ ರಿಡರ್ ಫಾರ್ ಸೆವೆಂಟಿಸ್", ಹೋಲ್ಟ್ ರಿನೆಹಾರ್ಟ ಆಂಡ್ ವಿನ್‌ಸ್ಟನ್, ನ್ಯೂಯಾರ್ಕ, 1971.
9. ಕ್ಯಾನಿಥ್ ಕೆನಿಸ್ಟನ್, "ಯು ಹ್ಯಾವ್ ಟು ಗ್ರೋ ಅಪ್ ಇನ್ ಸಿಯರ್ಸ ಡ್ಯಾಲೆ ಟು ನೋ ಹೌ ಬ್ಯಾಡ್ ಥಿಂಗ್ಸ ರಿಯಲಿ ಆರ್" ಇನ್ ಜ್ವಾಯಿಸ್ ಗೆಲ್ಬ್ ಆಂಡ್ ಮ್ಯಾರಿಯನ್ ಲಿಫ್‌ಪ್ಯಾಲಿ.
10. ಎಡ್ವರ್ಡ ಶಿಲ್ಸ್, "ಡ್ರಿಮ್ಸ ಆಫ್ ಪ್ಯಾನಿಟ್ಯೂಡ್, ನೈಟ್‌ಮೆರ್ಸ್ ಆಫ್ ಸ್ಕೇರ್ಸಿಟಿ" ಇನ್ ಎಸ್.ಎಮ್.ಲಿಪಸೆಟ್ ಆಂಡ್ ಫಿಲಿಫ್ ಜಿ.ಅಲ್ತಬಷ್.
11. ಅಮರಜೀತ್ ಕೌರ್ "ಸ್ಟುಡೆಂಟ್ ಮೂವ್‌ಮೆಂಟ್ಸ ಥ್ರೋ ದಿ ಇಯರ್ಸ್", ನ್ಯೂ ಏಜ್, ಮಾರ್ಚ 9, 1986.
12. ತಾರಾಚಂದ್, "ಹಿಸ್ಟರಿ ಆಫ್ ದಿ ಫ್ರೀಡಮ್ ಮೂವ್‌ಮೆಂಟ್ ಇನ್ ಇಂಡಿಯಾ" ಗವ್ರ್ನರ್ಮೆಂಟ್ ಆಫ್ ಇಂಡಿಯಾ, ನ್ಯೂ ದೆಹಲಿ.
13. ಅಲ್ತ್‌ಬಷ್ ಫಿಲಿಫ್ ಜಿ, "ಸ್ಟುಡೆಂಟ್ ಪೋಲಿಟಿಕ್ಸ್: ಹಿಸ್ಟಾರಿಕಲ್ ಪರ್ಸಪೆಕ್ಟಿವ್ ಆಂಡ್ ಚೆಂಜಿಂಗ್ ಸಿನ್", ವಿಕಾಸ ಪಬ್ಲಿಕೆಶನ್, ದೆಹಲಿ, 1975
14. ಸುನೀತ್ ಚೋಪ್ರಾ, "ಪೊಲಿಟಿಕಲ್ ಕಾನ್ಸಿಯಸ್‌ನೆಸ್ ಆಫ್ ದಿ ಸ್ಟುಡೆಂಟ್ ಮೂವ್‌ಮೆಂಟ್ ಇನ್ ಇಂಡಿಯಾ", ಸೋಶಿಯಲ್ ಸೈಂಟಿಸ್ಟ್, ಮೇ 1977
15. ಅಲ್ತಬಷ್ ಫಿಲಿಫ್ ಜಿ "ಸ್ಟುಡೆಂಟ್ಸ್, ಪೊಲಿಟಿಕ್ಸ್ ಆಂಡ್ ಹೈಯರ್ ಎಜುಕೇಶನ್ ಇನ್ ಎ ಡೆವಲಪಿಂಗ್ ಏರಿಯಾ : ದಿ ಕೆಸ್ ಆಫ್ ಬಾಂಬೆ, ಇಂಡಿಯಾ (ಥಿಸಿಸ್) ಚಿಕಾಗೋ 1966
16. ಅಲ್ತಬಷ್, ಪಿ.ಜಿ. "ಸ್ಟುಡೆಂಟ್ಸ್, ಪೊಲಿಟಿಕ್ಸ ಆಂಡ್ ಹೈಯರ್ ಎಜುಕೇಶನ್ ಇನ್ ಇಂಡಿಯಾ" ಇನ್ ಪಿ.ಜಿ.ಅಲ್ತಬಷ್ (ಸಂ), ದ ಸ್ಟುಡೆಂಟ್ ರೆವಲ್ಯೂಷನ್: ಎ ಗ್ಲೋಬಲ್ ಅನಾಲಿಸಿಸ್" ವಿಕಾಸ ಪಬ್ಲಿಕೇಷನ್ ದೆಹಲಿ
17. ಹಜಾರೆ ಎಸ್.ಸಿ., "ಪ್ರೋಟೆಸ್ಟ್ ಪೊಲಿಟಿಕ್ಸ್ ಆಫ್ ಸ್ಟುಡೆಂಟ್ ಯುಥ್ ಇನ್ ಇಂಡಿಯಾ", ದ ಇಂಡಿಯನ್ ಜರ್ನಲ್ ಆಫ್ ಪೊಲಿಟಿಕಲ್ ಸೈನ್ಸ್, ವ್ಯಾಲ್ಯೂಮ್, 49, ನಂ.1,1988
18. ಜವಾಹರಲಾಲ ನೆಹರು, "ಯುಥ್ ಆಂಡ್ ದ ಫ್ಯೂಚರ್" ಇನ್ ಸೆಲೆಕ್ಟೆಡ್ ವರ್ಕ್ಸ್ ಆಫ್ ಜವಾಹರಲಾಲ ನೆಹರು, ವ್ಯಾಲ್ಯೂಮ್ 14, ಎ ಪ್ರೋಜೆಕ್ಟ್ ಆಫ್ ನೆಹರು ಫೌಂಡೆಷನ್ ಓರಿಯಂಟ್ ಲಾಂಗಮನ್ ಲಿಮಿಟೆಡ್, ನ್ಯೂ ದೆಹಲಿ, 1982.
19. ಅಲ್ತಬಷ್, ಪಿ.ಜಿ. "ದ ಟ್ರಾನ್ಸ್‌ಫಾರಮೆಶನ್ ಆಫ್ ದಿ ಇಂಡಿಯನ್ ಸ್ಟುಡೆಂಟ್ ಮೂವ್‌ಮೆಂಟ್" ಏಷಿಯನ್ ಸರ್ವೆ, 1968
20. ಓಂದತ್ತ ತ್ರಿಪಾಠಿ, "ಎ ಸರ್ವೆ ಆಫ್ ಸ್ಟುಡೆಂಟ್ ಎಕ್ಟಿವಿಜಮ್ ಇನ್ ಯುನಿವರ್ಸಿಟಿ (ಥಿಸಿಸ್ ಸಬ್‌ಮಿಟೆಡ್ ಟು ಎಮ್.ಎಸ್. ಯುನಿವರ್ಸಿಟಿ, ಬರೋಡಾ), ಜುಲೈ 1981
21. ಆಶೀಸ್ ರಾಯ್, "ಎಕ್ಸ್ಟ್ರಿಮಿಸ್ಟ್ ಪೊಲಿಟಿಕ್ಸ್ ಆಂಡ್ ಯೂಥ್ ರಿವೋಲ್ಟ್ ಇನ್ ವೆಸ್ಟ್ ಬೆಂಗಾಲ್, 1967–72'', ಇನ್ ಮುಖರ್ಜಿ (ಸಂ), ಯೂಥ್ ಚೆಂಜ್ ಆಂಡ್ ಚ್ಯಾಲೆಂಜ್, ಕಲ್ಕತ್ತಾ, ಫಿರಮಾ ಕೆ.ಎಲ್.ಎಮ್, 1971.
22. ಅನಿಲ ಬಾರನ್ ರಾಯ್, " ಸ್ಟುಡೆಂಟ್ಸ್ ಆಂಡ್ ಪೊಲಿಟಿಕ್ಸ್ ಇನ್ ಇಂಡಿಯಾ" ಮನೋಹರ ಪಬ್ಲಿಕೆಷನ್, ದೆಹಲಿ 1977
23. ಜೋಸೆಫ್ ಡಿ.ಬೋನಾ, "ಇನ್‌ಡಿಸಿಪ್ಲಿನ್ ಆಂಡ್ ಸ್ಟುಡೆಂಟ್ ಲಿಡರ್‌ಶಿಪ್ ಇನ್ ಆನ್ ಇಂಡಿಯನ್ ಯುನಿವರ್ಸಿಟಿ" ಇನ್ ಎಸ.ಎಮ್.ಲಿಪ್‌ಸೆಟ್ (ಸಂ), ಸ್ಟುಡೆಂಟ್ ಪೊಲಿಟಿಕ್ಸ್, ಬೇಸಿಕ್ ಬುಕ್ಸ್, ನ್ಯೂಯಾರ್ಕ 1967
24. ಎ.ಕೆ.ಸಿಂಗ್, "ಅಕಾಡೆಮಿಕ್ ಪೊಲಿಟಿಕ್ಸ್ ಆಂಡ್ ಸ್ಟುಡೆಂಟ್ ಅನ್‌ರೆಸ್ಟ್ : ದ ಕೇಸ್ ಆಫ್ ರಾಂಚಿ ಯುನಿವರ್ಸಿಟಿ", ಇನ್ ಪಿ.ಜಿ. ಅಲ್ತಬಷ್ (ಸಂ), ಟರ್ಮಾಯಿಲ್ ಆಂಡ್ ಟ್ರಾನ್ಸಿಷನ್, ಲಾಲವಾಣಿ, ಬಾಂಬೆ, 1968
25. ಹಿಂಗೋರಾಣಿ ಆರ್.ಸಿ. "ಸ್ಟುಡೆಂಟ್ ಅನ್‌ರೆಸ್ಟ್ ಇನ್ ಬಿಹಾರ, 1974" ಇನ್ ಜಿ.ಎಸ್.ಮನ್ಸುಖಾನಿ (ಸಂ), ಸ್ಟುಡೆಂಟ್ ಪಾವರ್ ಇನ್ ಇಂಡಿಯಾ, ಆಕ್ಸ್‌ಫರ್ಡ ಆಂಡ್ ಐ.ಬಿ.ಹೆಚ್. ನ್ಯೂ ದೆಹಲಿ1975

26. ಯುಸುಫ್ ಎಸ್.ಎಮ್. "ಡೈಮಿನಷನ್ ಆಫ್ ಸ್ಟುಡೆಂಟ್ ಎಕ್ಟಿವಿಜಮ್ ಇನ ಬಿಹಾರ", ಜರ್ನಲ್ ಆಫ್ ಸೋಶಿಯಲ್ ಆಂಡ್ ಎಕೋನೊಮಿಕ್ ಸ್ಟಡಿ, ವ್ಯಾಲ್ಯೂಮ್ 7(1) ಮಾರ್ಚ 1979
27. ಅರವಿಂದ ನಾರಾಯನ್ ದಾಸ, "ಪಾರ್ಶಾಲಿಟಿ ಆಫ್ ಎ ಟೋಟಲ್ ರೆವ್ಯೂಲುಷನ್", ಮೆನ್‌ಸ್ಟ್ರಿಮ್, ಎನಿವಲ್ ನಂಬರ್, 1977
28. ಸಿನ್ಹಾ ಡಿ. "ಡೈಮೆನ್‌ಷನ್ಸ್ ಸ್ಟುಡೆಂಟೆ ಎಜಿಟೆಷನ್ಸ್ ಇನ ಇಂಡಿಯಾ", ಜರ್ನಲ್ ಆಫ್ ಸೋಷಿಯಲ್ ಆಂಡ್ ಎಕೋನೊಮಿಕ್ ಸ್ಟಡಿಸ್, ವ್ಯಾಲ್ಯೂಮ್ 3, ಸೆಪ್ಟೆಂಬರ್ 1975, ನಂ 3
29. ಥಕ್ಕರನ್ ಪಿ.ಕೆ. ಮೈಕಲ್, "ದ ಸ್ಟುಡೆಂಟ್ ಸಿಚುವೆಷನ್ ಇನ ಇಂಡಿಯಾ, 1968–78", ರಿಲಿಜಿಯನ್ ಆಂಡ್ ಸುಸೈಟಿ, ಸೆಪ್ಟೆಂಬರ್ 1978, ವ್ಯಾಲ್ಯೂಮ್ 25 ನ. 3
30. ಜಯರಾಮ್ ಎನ್. "ಸಾಧುಸ್ ನೋ ಲಾಂಗರ್ : ರಿಸೆಂಟ್ ಟ್ರೇಂಡ್ಸ್ ಇನ್ ಇಂಡಿಯನ್ ಸ್ಟುಡೆಂಟ್ ಎಕ್ಟಿವಿಜಮ್", ಹೈಯರ್ ಎಜುಕೇಶನ್ (8), 1979.
31. ಸಂಜಿಬ್ ಬರುಹಾ, "ಇಮಿಗ್ರೇಷನ್, ಎಥಿನಿಕ್ ಕಾನ್‌ಫ್ಲಿಕ್ಟ್ ಪೊಲಿಟಿಕಲ್ ಟರ್ಮಾಯಿಲ್ ಇನ ಆಸ್ಸಾಂ, 1979–1985", ಎಷಿಯನ್ ಸರ್ವೆ, ನವೆಂಬರ್ 1986 ವ್ಯಾಲ್ಯೂಮ್ 26, ನಂ. 11
32. ಎಂ. ಚಂದ್ರ ಪೂಜಾರಿ, "ರಾಜಕೀಯ ಬಡತನ" ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ,2008.
33. ಬಿ.ವಿ.ವೀರಭದ್ರಪ್ಪ, ಧರ್ಮ–ಮೀಸಲಾತಿ–ಸಾಮಾಜಿಕ ನ್ಯಾಯ–ಸಮಾನತೆ–ಆರ್ಥಿಕ ಹಕ್ಕು–ಅಂಬೇಡ್ಕರ್ ಚಿಂತನೆಯ ನೆಲೆಯಲ್ಲಿ, ದಲಿತ ಅಧ್ಯಯನ,(ಸಂ) ಟಿ.ಆರ್.ಚಂದ್ರಶೇಖರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
34. ಅಸ್ಗರ್ ಅಲಿ ಎಂಜಿನೀಯರ್, "ಮಂಡಲ್ ಕಮೀಷನ್ ಕಾಂಟ್ರಾವರ್ಸಿ" ಅಜಂತಾ ಪಬ್ಲಿಕೇಷನ್, 1991.